ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಸುಜನ ಸುದರ್ಶನ

ಕವಿ

## ಅಂಬರೀಷ ಭಾರದ್ವಾಜ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹೆಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ದೇವೀ ಭಾಗವತ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಅಪ್ರಕಟಿತ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೯೮

**ಪಾತ್ರಗಳು:**

ಧ್ರುವಸಂಧಿ - ಕೋಸಲದ ಮಹಾರಾಜ, ಮನೋರಮೆ - ಧ್ರುವಸಂಧಿಯ ಮೊದಲ ಹೆಂಡತಿ, ಲೀಲಾವತಿ – ಧ್ರುವಸಂಧಿಯ ಎರಡನೆಯ ಹೆಂಡತಿ, ಗುಣಸಾಗರ - ಕೋಸಲದ ಮಂತ್ರಿ, ಯುದ್ಧಜಿತ (ಯುಧಾಜಿತ) - ಮಗಧದ ದೊರೆ; ಲೀಲಾವತಿಯ ತಂದೆ, ವೀರಸೇನ - ಕಳಿಂಗದ ದೊರೆ, ಮನೋರಮೆಯ ತಂದೆ, ಸುದರ್ಶನ - ಮನೋರಮೆಯ ಮಗ, ಶತ್ರುಜಿತ - ಲೀಲಾವತಿಯ ಮಗ, ಭರದ್ವಾಜ – ಋಷಿ, ರಾಜವರ್ಧನ - ಕಾಶೀಶ; ಶಶಿಕಲೆಯ ತಂದೆ, ಮಂತ್ರಿ - ಕಾಶೀಶನ ಸಚಿವ, ಕನಕವರ್ಮ- ವಂಗದೇಶದ ದೊರೆ, ಜಗದೇವ - ಕುಂತಳದ ದೊರೆ, ಧನಂಜಯ -ಸೌರಾಷ್ಟ್ರದ ದೊರೆ, ಶಶಿಕಲೆ - ರಾಜಕುಮಾರಿ, ರಾಜವರ್ಧನನ ಮಗಳು, ಚಾರಕರು, ಸಖಿಯರು, ಶಬರರು, ಸಿಂಹ, ಪುರೋಹಿತರು, ಸೈನಿಕರು, ಕಳ್ಳರು ಇತ್ಯಾದಿ

**ಕಥಾ ಸಾರಾಂಶ:**

ಕೋಸಲದ ರಾಜ ಧ್ರುವಸಂಧಿ. ಮನೋರಮೆ ಮತ್ತು ಲೀಲಾವತಿ ಈತನ ಪತ್ನಿಯರು. ಮನೋರಮೆಯ ಮಗ ಸುದರ್ಶನನಾದರೆ, ಲೀಲಾವತಿಯ ಮಗ ಶತ್ರುಜಿತ. ಸುದರ್ಶನ ಸಾತ್ವಿಕನಾದರೆ ಶತ್ರುಜಿತ ದುಷ್ಟ.

ಹೀಗಿರಲು ಕಾಡಿಗೆ ಬೇಟೆಗೆಂದು ಹೋದ ಧ್ರುವಸಂಧಿ ಸಿಂಹ ಮೇಲೆರಗಿ ಬಂದುದರಿಂದ ಸತ್ತು ಹೋಗುತ್ತಾನೆ. ಹಾಗಾಗಿ ಮಂತ್ರಿ ಮತ್ತು ಪುರೋಹಿತರು ಮೊದಲ ಮಗ ಸುದರ್ಶನನೇ ಉತ್ತರಾಧಿಕಾರಿಯಾಗಲು ಸೂಕ್ತನೆಂದು ಭಾವಿಸಿ ಪಟ್ಟ ಕಟ್ಟಲು ಸಿದ್ಧರಾಗುತ್ತಾರೆ. ಈ ವಿಚಾರ ಸಹಿಸದ ಲೀಲಾವತಿಯು ಶತ್ರುಜಿತನಿಗೆ ಪಟ್ಟ ಸಿಗಬೇಕೆಂದು ಸಹಾಯಕ್ಕಾಗಿ ತನ್ನ ತಂದೆ ಯುಧಾಜಿತನನ್ನು ಬರಹೇಳುತ್ತಾಳೆ. ಮನೋರಮೆ ತನ್ನ ತಂದೆ ವೀರಸೇನನನ್ನು ಸಹಾಯಕ್ಕಾಗಿ ಕರೆಸುತ್ತಾಳೆ. ತಮ್ಮ ದೌಹಿತ್ರರೇ ಕೋಸಲಕ್ಕೆ ದೊರೆಯಾಗಬೇಕೆಂದು ಬಯಸಿದ ಯುಧಾಜಿತ ಮತ್ತು ವೀರಸೇನರು ಪರಸ್ಪರ ಯುದ್ಧ ಹೂಡುತ್ತಾರೆ. ಯುದ್ಧದಲ್ಲಿ ವೀರಸೇನ ಮರಣ ಹೊಂದಲು, ಎದೆಗುಂದಿದ ಮನೋರಮೆ ಮಗನೊಂದಿಗೆ ತಲೆತಪ್ಪಿಸಿಕೊಳ್ಳುತ್ತಾಳೆ. ಯುಧಾಜಿತ ಮೊಮ್ಮಗನಿಗೆ ಪಟ್ಟ ಕಟ್ಟಿ ಆತನೊಂದಿಗೆ ಕೋಸಲದಲ್ಲೇ ಉಳಿದು ಬೀಗುತ್ತಿರುತ್ತಾನೆ. ಮಾತ್ರವಲ್ಲದೆ ಶತ್ರುಗಳ ಸುಳಿವನ್ನರಿಯಲು ಗೂಢಚರರನ್ನು ನಿಯೋಜಿಸುತ್ತಾನೆ.

ಅನಾಥರಾದ ಮನೋರಮೆ, ಸುದರ್ಶನರು ಕಾಡಿನಲ್ಲಿ ಬರುತ್ತಿದ್ದಾಗ ಕಳ್ಳರ ಬಾಯಿಗೆ ಸಿಗುತ್ತಾರೆ. ಇದ್ದ ಅಲ್ಪ ಸಂಪತ್ತು ಕಳ್ಳರ ವಶವಾಗುತ್ತದೆ. ಶೋಕ ತೀವ್ರತೆಯಿಂದ ಕಾಡಿನಲ್ಲಿ ಅಲೆಯುತ್ತಿದ್ದಾಗ ಭರದ್ವಾಜ ಮುನಿಗಳ

ದರ್ಶನವಾಗುತ್ತದೆ. ಅವರೇ ಆಸರೆ ನೀಡಿ ಸುದರ್ಶನನಿಗೆ ಶಸ್ತ್ರ ಶಾಸ್ತ್ರಗಳನ್ನು ಕಲಿಸುತ್ತಾರೆ. ಸುದರ್ಶನ ಅಲ್ಲಿ ಪ್ರಬುದ್ಧನಾಗಿ ಬೆಳೆಯುತ್ತಾನೆ.

ಋಷಿಯ ಆಶ್ರಮದಲ್ಲಿ ಶತ್ರುಗಳು ಆಶ್ರಯ ಪಡೆದಿರುವ ಸುದ್ಧಿ ಯುಧಾಜಿತನನ್ನು ತಲುಪುತ್ತದೆ. ಅವನು ಮೊಮ್ಮಗನೊಂದಿಗೆ ಬಂದು, ಆಶ್ರಮದ ಮೇಲೆ ಧಾಳಿ ಮಾಡಲು ಭರದ್ವಾಜರ ತಪಃ ಪ್ರಭಾವ ಸುದರ್ಶನನನ್ನು ರಕ್ಷಿಸುತ್ತದೆ. ಯುಧಾಜಿತ ಬರಿಗೈಯಲ್ಲೇ ಮರಳುತ್ತಾನೆ.

ಇದುವೇ ಸಂದರ್ಭದಲ್ಲಿ ಕಾಶಿಯ ದೊರೆ ರಾಜವರ್ಧನ, ತನ್ನ ಮಗಳು ಶಶಿಕಲೆಗೆ ಸ್ವಯಂವರವೇರ್ಪಡಿಸುತ್ತಾನೆ. ಬೇರೆ ಬೇರೆ ದೇಶದ ರಾಜಕುಮಾರರಿಗೆ ಸ್ವಯಂವರದಲ್ಲಿ ಭಾಗಿಯಾಗಲು ಓಲೆ ಕಳುಹಿಸುತ್ತಾನೆ. ವಂಗ, ಕುಂತಳ, ಸೌರಾಷ್ಟ್ರದ ದೊರೆಕುಮಾರರೆಲ್ಲರು ಕಾಶಿಯೆಡೆ ಪ್ರಯಾಣ ಬೆಳೆಸುತ್ತಾರೆ. ಈ ನಡುವೆ ವನಕೇಳಿಗೆ ಹೋದ ಶಶಿಕಲೆಗೆ ಸುದರ್ಶನನ ಭೇಟಿಯಾಗುತ್ತದೆ. ಅವರೀರ್ವರೂ ತಮ್ಮ ಅನುರಾಗವನ್ನು ಪರಸ್ಪರ ಪ್ರಕಟಪಡಿಸುತ್ತಾರೆ. ಶಶಿಕಲೆ, ಸ್ವಯಂವರದ ದಿನ ನಿನ್ನನ್ನೇ ವರಿಸುತ್ತೇನೆ ಎಂದು ಸುದರ್ಶನನಿಗೆ ಭಾಷೆ ಕೊಡುತ್ತಾಳೆ. ಅದರಂತೆ ಸ್ವಯಂವರದ ದಿನ ಶಶಿಕಲೆ, ಸುದರ್ಶನನನ್ನು ವರಿಸಲು, ಬಂದಿರುವ ರಾಜಕುಮಾರರೆಲ್ಲ ಯುಧಾಜಿತನ ನಾಯಕತ್ವದಲ್ಲಿ ಸುದರ್ಶನನ ಮೇಲೆ ಏರಿಹೋಗುತ್ತಾರೆ. ಕಾಶೀಶನು ಅವರನ್ನೆಲ್ಲ ಸಮಾಧಾನಿಸಿದರೂ ಯುಧಾಜಿತ ಮತ್ತು ಶತ್ರುಜಿತರು ಸುಮ್ಮಗಿರದೆ ಸುದರ್ಶನನ ಮೇಲೆ ಮುಗಿಬೀಳುತ್ತಾರೆ. ಹೀಗೆ ಉಂಟಾದ ಯುದ್ಧದಲ್ಲಿ ಅವರೀರ್ವರನ್ನು ಕೊಂದು ಸುದರ್ಶನ, ತಾಯಿ ಮನೋರಮೆಗೆ ನೆಮ್ಮದಿ ತರುತ್ತಾನೆ. ಆ ಬಳಿಕ ಸುದರ್ಶನನಿಗೆ ಶಶಿಕಲೆಯೊಂದಿಗೆ ವೈಭವದ ವಿವಾಹ ಮಹೋತ್ಸವ ನಡೆಯುತ್ತದೆ. ನವದಂಪತಿಗಳು ಹಿರಿಯರ ಆಶೀರ್ವಾದ ಪಡೆದು ಕೋಸಲದೆಡೆ ಪ್ರಯಾಣ ಬೆಳೆಸುತ್ತಾರೆ. ಕೋಸಲದ ಪ್ರಜಾಜನ ಸುದರ್ಶನನಿಗೆ ಪಟ್ಟಕಟ್ಟಿ ಸಂತೋಷವನ್ನನುಭವಿಸುತ್ತಾರೆ.

**ಕವಿ ಪರಿಚಯ:**

ಉಡುಪಿ ಜಿಲ್ಲೆ, ಕಾರ್ಕಳ ತಾಲೂಕಿನ ಕಬ್ಬಿನಾಲೆಯ ಮಧುಸೂದನ ಭಟ್ಟ ಮತ್ತು ಸುಮತಿಯಮ್ಮನವರ ಕೊನೆಯ ಮಗನಾಗಿ ಜನಿಸಿದ ಅಂಬರೀಷ ಭಾರದ್ವಾಜರು, ಬಾಲ್ಯದಲ್ಲೇ ಯಕ್ಷಗಾನದ ಕಡೆ ಪ್ರಭಾವಿತರಾದವರು ಅದಕ್ಕೆ ಕಾರಣ, ತಂದೆ ಮತ್ತು ಅಣ್ಣಂದಿರೆಲ್ಲ ಯಕ್ಷಗಾನ ಕಲಾವಿದರಾಗಿ ಮತ್ತು ಪ್ರಸಂಗ ಕರ್ತರಾಗಿ ಪ್ರಸಿದ್ಧರಾಗಿದ್ದದ್ದು. ಕಬ್ಬಿನಾಲೆಯಲ್ಲಿಯೇ ಪ್ರಾಥಮಿಕ ಶಿಕ್ಷಣ ಪಡೆದ ಇವರು, ಹೆಬ್ರಿಯಲ್ಲಿ ಕಾಲೇಜು ಶಿಕ್ಷಣ ಮುಗಿಸಿದರು. ವಿದ್ಯಾರ್ಥಿಯಿದ್ದಾಗಲೇ ಬಣ್ಣ ಹಚ್ಚಿ, ಗೆಜ್ಜೆ ಕಟ್ಟಿ, ಹೆಬ್ರಿಯ ಪರಿಸರದಲ್ಲಿ ಬಡಗು ತಿಟ್ಟಿನ ಹವ್ಯಾಸಿ ಕಲಾವಿದರಾಗಿ ಹೆಸರು ಪಡೆದರು. ಕಾಸರಗೋಡಿನಲ್ಲಿ ಕನ್ನಡ ಎಂ. ಎ. ಅಧ್ಯಯನ ಮಾಡಿ ದ್ವಿತೀಯ ಶ್ರೇಣಿಯಲ್ಲಿ ವಿಜೇತರಾದರು. ಈ ಸಂದರ್ಭದಲ್ಲಿ ಶ್ರೀ ಎಡನೀರು ಮಠದಲ್ಲಿ ಆಶ್ರಯವಿದ್ದುದರಿಂದ ತೆಂಕು ತಿಟ್ಟಿನ ಹವ್ಯಾಸಿ ವೇಷಧಾರಿಯಾಗುವ ಅವಕಾಶವೂ ಒದಗಿ ಬಂತು.

ಮುಂದೆ ಕೆಲವು ವರ್ಷಗಳ ತನಕ ಹೆಬ್ರಿ, ಹಿರಿಯಡಕಗಳ ಪದವಿ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕನಾಗಿ ಸೇವೆ ಸಲ್ಲಿಸಿದರು. ಆ ಬಳಿಕ ಸರಕಾರಿ ಸೇವೆಗೆ ಸೇರಿ, ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕನಾಗಿ ಕರ್ತವ್ಯ ನಿರ್ವಹಿಸ ತೊಡಗಿದರು. ಶ್ರೀಯುತರು ಯಕ್ಷಗಾನ ತಾಳಮದ್ದಳೆಯಲ್ಲಿ ಅರ್ಥಧಾರಿಯಾಗಿರುವ ಜೊತೆಯಲ್ಲಿ ಪ್ರಸಂಗಕರ್ತರೂ ಹೌದು.

ಭಾಷಣ, ಲೇಖನ, ಸಂಗೀತ ಮೊದಲಾದ ಸಾಹಿತ್ಯಕ - ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸದಾ ತೊಡಗಿಕೊಂಡಿರುವ ಇವರು, ಪತ್ನಿ ಉಷಾರೊಂದಿಗೆ ಪ್ರಸ್ತುತ ತೀರ್ಥಹಳ್ಳಿಯಲ್ಲಿ ವಾಸವಾಗಿದ್ದು, ಅಲ್ಲಿಯ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ವೃತ್ತಿ ನಿರ್ವಹಿಸುತ್ತಿದ್ದಾರೆ.

ಇವರು ಬರೆದ ಪ್ರಸಂಗಗಳು: ಸುಜನ ಸುದರ್ಶನ" (ಪೌರಾಣಿಕ) ಮತ್ತು "ರುಧಿರ ನಯನೆ" (ಐತಿಹಾಸಿಕ)

**ಟಿಪ್ಪಣಿ:**

ಈ ಪ್ರಸಂಗವು ಈಗ ಅಂತರ್ಜಾಲ ಪ್ರತಿಯಾಗಿಯೇ ಮೊದಲ ಬಾರಿಗೆ ಲೋಕಾರ್ಪಣೆಯಾಗ್ತುತ್ತಿದೆ.

**ಕವಿಯ ಬಿನ್ನಹ:**

ಕೆಲವಾರು ವರ್ಷಗಳಿಂದ ಯಕ್ಷಗಾನ ಪ್ರಸಂಗವೊಂದನ್ನು ಬರೆದು ಕವಿಯಾಗಬೇಕೆಂಬ ಅಪೇಕ್ಷೆ ನನ್ನಲ್ಲಿ ಆಗಾಗ ಮೂಡಿ ಮರೆಯಾಗುತ್ತಿತ್ತು. ಆದರೆ ಸೂಕ್ತ ಪ್ರಸಂಗ ವಸ್ತು ಸಿಗದೇ ಈ ಪ್ರಯತ್ನ ಕೈಗೂಡುತ್ತಿರಲಿಲ್ಲ. ಆದರೆ, ಒಂದು ದಿನ, ದೇವಿ ಪುರಾಣದಲ್ಲಿ ಬರುವ ಸುದರ್ಶನೋಪಾಖ್ಯಾನವೆಂಬ ಕಥಾವಸ್ತು ಗಮನ ಸೆಳೆದು ಬರೆಯಲಾರಂಭಿಸಿದೆ. ಕೆಲವು ದಿನ ಕಳೆದ ನಂತರ ಇದೇ ಕಥಾವಸ್ತು "ಶಶಿಕಲಾ ಪರಿಣಯ" ಎಂಬ ಹೆಸರಿನಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ " " ವೆಂಬ ಹೆಸರಿನಲ್ಲಿ ಯಕ್ಷಗಾನ ಕ್ಷೇತ್ರದಲ್ಲಿ ಖ್ಯಾತವಾಗಿದೆ ಎಂಬ ವಿಷಯ "ಶಶಿಕಲಾಪರಿಣಯ ತಿಳಿಯಿತು. ಒಂದು ಕಥಾವಸ್ತುವನ್ನಾಧರಿಸಿ ಬೇರೆ ಬೇರೆ ಕವಿಗಳು ಯಕ್ಷಗಾನ ಪ್ರಸಂಗವನ್ನು ಬರೆದ ಇತಿಹಾಸ ಹೇಗೂ ಇದೆಯಲ್ಲವೆಂದು ತಿಳಿದು ಬರೆಯುವದನ್ನು ನಿಲ್ಲಿಸಲಿಲ್ಲ, ಮುಂದುವರೆಸಿದೆ. ಹೀಗೆ "ಸುಜನ ಸುದರ್ಶನ" ವೆಂಬ ಹೆಸರಿನ ನನ್ನ ಮೊದಲ

ಪ್ರಸಂಗ ಮೈದಳೆಯಿತು. ನನ್ನದಿದು ಪ್ರಥಮ ಪ್ರಯತ್ನವಾಗಿರುವುದರಿಂದ ಕಾವ್ಯ ಗುಣದಲ್ಲಿ, ಛಂಧಸ್ಸಿನಲ್ಲಿ ದೋಷವಿರಬಹುದು. ವಿಬುಧಶ್ರೇಷ್ಠರು ಈ ಲೋಪವನ್ನು ಮನ್ನಿಸಬೇಕೆಂದು ವಿನಮ್ರವಾಗಿ ವಿನಂತಿಸಿಕೊಳ್ಳುತ್ತೇನೆ.

ಅಂಬರೀಷ ಭಾರದ್ವಾಜ
ಕನ್ನಡ ಉಪನ್ಯಾಸಕರು
ಬಾಲಕಿಯರ ಸ ಕಾಲೇಜು .ಪೂ .ಪ .
ತೀರ್ಥಹಳ್ಳಿ, ಶಿವಮೊಗ್ಗ ಜಿಲ್ಲೆ.

# ಪ್ರಸಂಗ ಸಾಹಿತ್ಯ

**ಕುಸುಮ**
ಮುದ್ದುವೊಗ ಮೂರುತಿಯೆ | ಮುದ್ರಾಡಿ ಗಣಪತಿಯೆ |
ಶುದ್ಧಜ್ಞಾನವ ನೀಡಿ ಮುದದಿ ಕಾಯೊ ||
ವಿದ್ಯಾಧಿಪತಿದೇವ | ಬುದ್ಧಿ ಭಾವದಿ ನೆಲೆಸಿ |
ಯುದ್ಧರಿಸಬೇಕೆನ್ನ ಮತಿಯ ಕೃತಿಯ ||೧||

ಮೆರೆವ ಕಾರಣಗಿರಿಯ |  ಪೆರಣಂಕಿಲದೊಳಿರುವ |
ಪರಮದೇವರ ದೇವ ವಿಘ್ನೇಶನೆ ||
ಅರಿವು ನೀ ಶ್ರುತಗೊಳಿಸ | ಲೊರೆವೆನ್ನೈ ಪ್ರಥಮ ಕೃತಿ |
ಹರಸು ಸೋಮೇಶ್ವರದ ಜ್ಞಾನೇಶನೆ ||೨||

**ಭಾಮಿನಿ**
ಶ್ವೇತ ಪದ್ಮಾಸನಳೆ ಬ್ರಹ್ಮನ | ಪ್ರೀತೆ ವಿದ್ಯಾದೇವಿ ಸಿದ್ಧಿಯ |
ದಾತೆ ವರ  ಸಂಗೀತ ಸಾಹಿತ್ಯಾದಿ ಸೇವಿತಳೆ||
ಮಾತಿಗಧಿದೇವತೆಯೆ ಕಾವ್ಯದ | ಮಾತೆ ವೀಣಾಧರಿಯೆ ನಿನ್ನಯ |
ಜಾತನೀತನ ಜಿಹ್ವೆಯೊಳು ನೆಲೆಯಾಗು ಶಾರದೆಯೆ ||೩||

ದೇವಕಿಯ ಜಠರದಲಿ ಪುಟ್ಟುತ | ಗೋವ ಕುಲದೊಳು ಬೆಳೆದು ಮಹ ಮಾ |
ಯಾವಿ ಪೂತನಿ ವಧಿಸಿ ಗೋವರ್ಧನವ ಧರಿಸುತಲಿ ||
ಮಾವ ಕಂಸನ ಕೊಂದು ಕೌರವ | ಕೀವು ಕಳೆಯುತ ಪಾಂಡು ತನಯರ |
ಜೀವ ಕಾಯ್ದನು ಕಬ್ಬಿನಾಲೆಯ ರುಕ್ಮಿಣೀಪತಿಯು ||೪||

ಜನನಿ ಸುಮತಿಗೆ ಜನಕ ಮಧುಸೂ | ದನಗೆ ಸುತನಾನಂಬರೀಷನು |
ದನುಜರಿಪುವರ ಕಬ್ಬಿನಾಲೆಯ ಕೃಷ್ಣ ಪೂಜಕನು ||
ಮನದಿ ಮಾತಾ ಪಿತರ ನಮಿಸುತ | ವಿನುತವಹ ಸೋದರರ ಸ್ಮರಿಸುತ |
ಮನದೊಡತಿಯಳ ಹರಕೆಗೊಳುತಲಿ ಪೇಳ್ವೆನೀ ಕೃತಿಯ ||೫||

**ಭೋಗ ಷಟ್ಪದಿ**
ಪರಮ ದೇವಿ ಭಾಗವತದ | ಮೆರೆವ ಪುಣ್ಯ ಚರಿತೆಯಿದನು |
ವರಸುದರ್ಶನೋಪಖ್ಯಾನವೆಂಬ ಪೆಸರೊಳು||
ಒರೆವೆ ಯಕ್ಷಗಾನದೊಳಗೆ | ಹರುಷದಿಂದ ವಿಬುಧ ಜನರು |
ಹರಸಿ ತಪ್ಪ ತಿದ್ದಿರೆಂದು ಬೇಡಿಕೊಂಬೆನು||೬||

**ಸೌರಾಷ್ಟ್ರ - ತ್ರಿವುಡೆ**
ಒಂದುದಿನ ಧ್ರುವಸಂಧಿ ರಾಯನು |
ವಂದಿ ಸಂದೋಹವನು ಕೂಡುತ |
ಬಂದು ಸಿಂಹಾಸನವನೇರುತ | ಲೆಂದನಿಂತು ||೭||

ತರಣಿ ವಂಶಜನಾಗಿ ಕೋಸಲ |
ಪುರವನಾಳುತ ಸತಿಮನೋರಮೆ |
ತರುಣಿ ಲೀಲಾವತಿಯ ಕೂಡುತ | ಲಿರುವೆ ಸುಖದಿ ||೮||

ಸತಿಮನೋರಮೆ ಸುದತಿ ಲೀಲೆಯ |
ರತಿ ಚೆಲುವ ಕುವರರನು ಹಡೆದರು |
ಸುತ ಸುದರ್ಶನ ಶತ್ರುಜಿತ ಬಲು | ಚತುರರಿಹರು||೯| |

**ಕಂದ**
ದೊರೆಯೀಪರಿ ಯೋಚಿಸುತಿರೆ |
ಪರಿಚಾರಕ ಭಟನು ಬಂದು ವಂದಿಸುತಾಗಂ ||
ಪರಿಪರಿಯುಪಚರಿಸುತ ನೃಪ |
ಹರುಷವನಾಂತಿರಲು ಚಾರ ದುಗುಡದಿ ಪೇಳ್ದಂ ||೧೦||

**ಸಾರಂಗ - ಅಷ್ಟ**
ಧರಣಿಪ ಕೇಳಬೇಕು | ರೈತರ ಜೀವ |
ಮರೆಯದೆ ಕಾಯಬೇಕು ||
ಪುರದಾಚೆ ಬನದಲ್ಲಿ | ಕರಿ ಸಿಂಹ ಹುಲಿ ತೋಳ |
ಭರದಿಂದ ಬಂದೂರ | ವರನೆಲ್ಲ ಕಾಡಿದೆ ||೧೧||

ಗದ್ದೆ ತೋಟಗಳನೆಲ್ಲ | ಹಾಳ್ಮಾಡಲು |
ಕದ್ದು ಬರ್ಪವು ಮೆಲ್ಲ ||
ಉದ್ದ ಬಾಲದ ಮಂಗ | ಮುದ್ದು ಮೊಗದ ಮೊಲ |
ಸದ್ದ ಮಾಡದೆ ಹೊಡೆದು | ಗೆದ್ದು ಬೀಗುವ ಬನ್ನಿ ||೧೨||

**ಭಾಮಿನಿ**
ಚಾರಕನ ನುಡಿ ಕೇಳಿ ರಾಯನು |
ಭೂರಿ ತೋಷವ ತಾಳಿ ಪೇಳ್ದನು |
ಸೇರಿ ಶಬರರ ಕೂಟದೊಂದಿಗೆ ಬೇಟೆಗೆಂದೆನುತ ||
ಸಾರಿ ಪೋಗುವ ನಾವು ಕಾಡೊಳು |
ಭಾರಿ ಹುಲಿ ಕರಿ ಕರಡಿ ಸಿಂಹವ |
ಗಾರುಗೆಡಿಸುವುದೆಂದು ತಿಳಿಸುತ ಜಾಲ ಪೊರಡಿಸಿದ ||೧೩||

**ಮಧುಮಾಧವಿ - ತ್ರಿವುಡೆ**
ರಮಣಿ ಲೀಲಾವತಿಯು ಸೊಗಸಿನ |
ಭ್ರಮರಿ ಸೊಬಗಿನ ಸೋಗೆ ಮೋಹನೆ |
ರಮಣಗತಿ ಸುಪ್ರೀತೆ ಸಖಿ ಜೊತೆ |
ಗಮಿಸಿ ಬಂದಳುಪವನಕೆ || ೧೪||

ಅಂತರಂಗದ ಸಖಿಯೆ ನನಗತಿ |
ಚಿಂತೆಯೊದಗಿದೆ ಸುತಗೆ ದೊರೆತನ |
ವೆಂತು ದೊರೆವುದು ಪೇಳು ನೀನೆಲೆ |
ಸಂತವಿಸುತಲಿ ನನ್ನನು ||೧೫||

ಏತಕೀ ಪರಿ ಚಿಂತೆ ನಿನಗತಿ |
ಪ್ರೀತಿಯಿಂದಿಹ ತಂದೆಯಿಲ್ಲವೆ |
ಪೌತ್ರನಿಗೆ ಸುಖವೀವ ತವ ಪಿತ |
ಮಾತು ಸುಮ್ಮನೆಯೇತಕೆ ||೧೬||

**ಸುರುಟಿ - ಏಕ**
ಸಲಹೆ ಸಮಂಜಸವು | ತಂದೆಯ |
ಸಲುಗೆ ಪ್ರಯೋಜನವು ||
ಕಲಹದಿ ನಿಪುಣನು | ಕೆಲದೊಳಗಿರುತಿರೆ |
ಸಲಹಿದ ಸುತನಿಗೆ | ಸಲುವುದು ದೊರೆತನ ||೧೭||

**ಭಾಮಿನಿ**
ರಮಣಿಯೀಪರಿಯಿಂದ ಯೋಚಿಸಿ |
ಕುಮತಿಯೊಳು ತಂದೆಯನು ಬರಿಸುವ |
ದೆಮಗೆ ಸನುಮತವೆಂದು  ತವರಿಗೆ ಚರರ ಕಳುಹಿದಳು ||
ಸುಮನ ಸಖ ವಂಶದೊಳು ಶೀತಲ |
ಸಮರ ಸಿಂಹಾಸನಕೆ ನಡೆದಿರೆ |
ಯಮನ ಪಾಶವು ನೃಪನ ಪಿಡಿಯಿತು ಸಿಂಹ ರೂಪದೊಳು || ೧೮||

**ಬೇಗಡೆ - ಅಷ್ಟ**
ಬಂದನು ಬೇಟೆಗೆಂದೆನುತ | ರಾಯ |
ಚಂದದಿ ಶಬರರ ಸಹಿತ ||
ಮಂದಿ ಮಾರ್ಬಲವೆಲ್ಲ | ಹಂದಿ ಸಿಂಹವನೆಲ್ಲ |
ಕಂದರ ಗುಹೆ ಗುಡ್ಡ | ವೆಂದು ಹುಡುಕಿ ಮೆಲ್ಲ ||೧೯||

ರಾಯ ತಾನಾವೇಶದಿಂದ | ಪ್ರಾಣಾ |
ಪಾಯ ಕಾಣದೆ ಸಿಂಹವೊಂದ ||
ಗಾಯಗೊಳಿಸೆ ಮೃಗ | ರಾಯ | ಹಾರಿತು ಮೇಲು |
ಪಾಯವಿಲ್ಲದೆ | ನೃಪ | ಸಾಯಲಾದನಕಟ ||೨೦||

**ಭಾಮಿನಿ**
ಭಾರಿ ಸಿಂಹವು ಹರಿತ ಪಂಜದಿ |
ಗೀರಿ ರಾಯನ ಗಾಯಗೊಳಿಸಲು |
ಸಾರಿ ಕೂಗುತಲಯ್ಯೊಯೆನ್ನುತ ಜೀವವ್ಹೈದಿದನು ||
ವೀರನೀಪರಿ ಸ್ವರ್ಗಲೋಕವ |
ನೇರಿ ಹೋಗಲು ಕೆಟ್ಟ ವಾರತೆ |
ಯೂರವರ ಕಂಗೆಡಿಸಿ ಮುಳುಗಿತು ಶೋಕ ಸಾಗರದಿ ||೨೧||

**ಕಾಂಬೋಧಿ - ಝಂಪೆ**
ಅಂತ್ಯ ಸಂಸ್ಕಾರ ವಿಧಿ ಮಂತ್ರ ಶಾಸ್ತ್ರಗಳಿಂದ |
ಲಂತ್ಯವಾಯಿತು ದುಃಖ ತುಂಬಿ ||
ಚಿಂತಾಸಮುದ್ರವದು ಕೋಸಲದಿ ಹರಡಿರಲು |
ಸಂತೋಷವೆಂಬುದಿನಿತಿಲ್ಲ ||೨೨||

ಮಂತ್ರಿ ಗುಣ ಸಾಗರನು ವರಪುರೋಹಿತರೊಡನೆ |
ಚಿಂತಿಸಿದನೇಕಾಂತ ಗೃಹದಿ ||
ಸಂತುಲಿತದಾಡಳಿತ ನಡೆಸೆ ಧರ್ಮದಿ ನೀತಿ |
ವಂತನು ಸುದರ್ಶನನೆ ಲೇಸು ||೨೩||

ಮುಂದೆ ಬಹ ಪೂರ್ಣಿಮೆಯ ದಿನ ಸುದರ್ಶನಗೆ ನಲಿ |
ವಿಂದ ಪಟ್ಟವ ರಚಿಪುದೆಂದು ||
ಸಂದಣಿಪ ರಾಜಪಥದಲ್ಲಿ ಘೋಷಣೆ ಕೂಗಿ |
ಚಂದದಿಂ ಪುರವ ಸಿಂಗರಿಸಿ ||೨೪||

**ಭಾಮಿನಿ**
ವರ ಸುದರ್ಶನನಿಂಗೆ ರಾಜ್ಯದ |
ಪರಮ ಪದವಿಯನೀವ ವಾರ್ತೆಯ |
ದುರುಳೆ ಲೀಲಾವತಿಯು ಕೇಳುತ ಕನಲಿ ಕೋಪದೊಳು ||
ಇರೆನು ನಾ ಮೌನದೊಳು ತಂದೆಯು |
ಬರಲು ಶತ್ರುಜಿತನಿಗೆ ಪಟ್ಟವ |
ನೆರಹದಿರೆ ನಾನಲ್ಲ ಲೀಲಾವತಿಯು ಸುತನಾಣೆ ||೨೫||

**ಸೌರಾಷ್ಟ್ರ - ತ್ರಿವುಡೆ**
ಮಗಧ ದೇಶಾಧೀಶನಾಗಿಹ |
ವಿಗಡ ವಿಕ್ರಮಿ ಯುದ್ಧಜಿತನತಿ |
ಸೊಗಸಿನಾ ಸಭೆಯನ್ನು ಸೇರಿದ | ನಗುವ ಸೂಸಿ ||೨೬||

ವೀರರಾಯನು ಸಿಂಹ ವಿಷ್ಟರ |
ವೇರಿ ಕುಳಿತನು ಸುಂದರದ ನಗೆ |
ಬೀರಿ ಸಭಿಕರ ಕುರಿತು ಮಾತನು | ಸಾರಿ ಪೇಳ್ದ ||೨೭||

ಭರತ ಭೂಮಿಯನೇಕ ಹಿಡಿತದೊ |
ಳಿರಿಸಲೋಸುಗ ಬದುಕ ಕಳೆದೆನು |
ಬರಿದೆ ಯತ್ನವು ನನ್ನದಾಯಿತು | ಒರೆವುದೇನು||೨೮||

ಪುತ್ರ ಸಂತತಿಯಿಲ್ಲ ಬದುಕಿಗೆ |
ಪುತ್ರಿ ಲೀಲೆಯೆ ಸರ್ವ ಸಾಧನ |
ಪೌತ್ರನಾಗಿಹ ಶತ್ರುಜಿತ ತಾನ್ | ಮಾತ್ರನೋರ್ವ||೨೯||

**ಭಾಮಿನಿ**
ಅನಿತರೊಳು ಕೋಸಲದ ಚಾರಕ |
ವಿನಯದೊಳು ವಂದಿಸುತ ಪೇಳ್ದನು |
ಜನರೊಡೆಯ ಕೇಳ್ ಕೋಸಲೇಶನು ಕಾಲವಶನಾದ ||
ಘನ ಸುದರ್ಶನನಿಂಗೆ ಪಟ್ಟವ |
ಸನುಮತದಿ ರಚಿಸಲ್ಕೆ ಸಚಿವರು |
ಮುನಿದ ಲೀಲಾವತಿಯು ನೆರವಿಗೆ ನಿಮ್ಮ ಕರೆದಿಹಳು ||೩೦||

**ಮಾರವಿ - ಏಕ**
ಎಂದಾ ಮಾತನು ಕೇಳುತ ಭೂಪನು |
ಸಂದೇಶದ ಚರನ ||
ಮುಂದಕೆ ನಡೆನೀ ಹಿಂದೆಯೆ ಬರ್ಪೆನು |
ಎಂದೆನುತಲಿ ಕಳುಹಿ || ೩೧||

ತರಳ ಸುದರ್ಶನನೆನ್ನಯ ಸಾಹಸ |
ವರಿಯದೆ ಬೆಳೆದಿಹನು ||
ತರಿದಾತನ ನಾ ಮೊಮ್ಮಗೆ ಪಟ್ಟವ |
ವಿರಚಿಸುವೆನು ಮುದದಿ ||೩೨||

ಸುದತಿ ಮನೋರಮೆಯಳ ಹೊರಗಟ್ಟುತ |
ಮದವನು ಮುರಿಯುವೆನು ||
ಮುದವನು ಲೀಲಾವತಿಗತಿ ತರುವೆನು |
ತೊದಲಿಲ್ಲವು ದಿಟವು ||೩೩||

ಎನ್ನುತ ದುರುಳನು ಸೇನೆಯ ಕೂಡುತ |
ಮುನ್ನುಗ್ಗುತ ಪೊರಟ ||
ಉನ್ನತ ಕೋಸಲ ದೇಶವ ಸೇರಿದ |
ನುನ್ನತಿಯನು ತೊರೆದು ||೩೪||

**ಯಮುನಾ ಕಲ್ಯಾಣಿ - ತ್ರಿವುಡೆ**
ಕೋಸಲೇಂದ್ರನ ಸತಿ ಮನೋರಮೆ |
ಮಾಸಿದಾನನ ಸೂಸುತ ||
ಮೋಸದಾಟವ ತಿಳಿದು ಸುತನನು |
ಬೇಸರದಿ ತಾನ್ ಕರೆದಳು ||೩೫||

ಮಗನೆ ಬಾ ಬಾ ಬಾರೊ ಮನಸಿಗೆ |
ಸೊಗಸು ತೋರುವ ಚಂದ್ರಮ ||
ಮೊಗವ ನೋಡದೆ ಬಹಳ ಬಳಲಿಹೆ |
ಮುಗುದ ನೀಡೆಲೊ ಸಂಭ್ರಮ ||೩೬||

**ಪಂಚಾಗತಿ - ಮಟ್ಟೆ**
ಜನನಿ ನಿನ್ನ ಕರೆಯ ಕೇಳಿ | ಗಮಿಸಿ ಬಂದೆನು ||
ವಿನಯದಿಂದ ಕರವ ಮುಗಿದು | ನಮಿಸಿ ನಿಂದೆನು ||
ಮನದ ಮೂಲೆಯಲ್ಲಿ ನಿಮಗೆ | ಚಿಂತೆಯೇನಿದೆ ||
ತನುವ ಮೀಸಲಿರಿಸಿ ನಾನು | ಸಂತಸವ ತಹೆ ||೩೭||

**ಕೇದಾರಗೌಳ - ಝಂಪೆ**
ಕಂದ ಕೇಳೆಲೆ ಮಾತನು | ಸವತಿಯಳ |
ತಂದೆ ಬಂದಿಹ ಪರಿಯನು ||
ಕೊಂದು ನಿನ್ನನು ಕಳೆವರು | ತಮ್ಮನನು |
ಮುಂದೆ ರಾಜನ ಮಾಳ್ಪರು ||೩೮||

**ಸೌರಾಷ್ಟ್ರ - ತ್ರಿವುಡೆ**
ಅಮ್ಮ ನೀನಿದಕಿಂತು ಚಿಂತೆಯ |
ಸುಮ್ಮನೆಯೆ ಮಾಡುವುದೆ ದೊರೆತನ |
ತಮ್ಮನಿಗೆ ಸಿಗುವಲ್ಲಿ ನನ್ನಯ | ಸಮ್ಮತಿಯಿದೆ ||೩೯||

ಕೆಡೆವ ದೇಹಕೆ ಕೆಡುವ ದೇಶಕೆ |
ಒಡೆಯನಾಗುವ ಮೋಹವಿಲ್ಲವು |
ಪೊಡವಿ ದೇವಿಯು ಕಲಹ ಪ್ರೀತಳು | ಬಿಡುವಳೇನು ||೪೦||

ತಮ್ಮನಾಳುವನೆಂದು ನೀನತಿ |
ಸುಮ್ಮಗಿದ್ದರೆ ಕೇಡು ಬರುವುದು |
ನಮ್ಮಪಿತನಾ ಯುದ್ಧಜಿತನಿಗೆ | ಮೊಮ್ಮನವನು ||೪೧||

ಯುದ್ಧಜಿತನಾ ಹಸ್ತಕ್ಷೇಪವು |
ಶುದ್ಧ ಕೋಸಲದಲ್ಲಿ ನಡೆಯದು |
ಮದ್ದನರೆಯುವೆನೆಂದು ಬಾಲಕ | ಸಿದ್ಧನಾದ ||೪೨| |

**ಕೇದಾರಗೌಳ - ಅಷ್ಟ**
ಕಂದ ನೀ ಸೈರಿಸು ಪುರಕಳಿಂಗದ ದೊರೆ |
ತಂದೆಯಾ ವೀರಸೇನ ||
ಬಂದು ಸೇನೆಯ ಕೂಡಿ ದುರುಳರ ತರಿವನು |
ಸಂದೇಹವಿಲ್ಲದಕೆ ||೪೩||

ಇಂತು ಮನೋರಮೆ ಸುತ ಸುದರ್ಶನನ್ನು |
ಸಂತವಿಸಿದಳಾಗಲೇ||
ಸಂತತಾತಂಕದಿ ದಿನವೆಲ್ಲ ಚಿಂತನ |
ಮಂಥನದಿಂ ಕಳೆಯೆ ||೪೪||

**ಸೌರಾಷ್ಟ್ರ - ತ್ರಿವುಡೆ**
ಧರಣಿದೇವಿಯ ಕೊರಳ ಪದಕದ |
ತೆರದಿ ಮೆರೆಯುವ ಭವ್ಯ ನಾಡದು |
ಪುರ ಕಳಿಂಗವು ವೀರಸೇನನ | ದೊರೆತನದೊಳು ||೪೫||

ಸತ್ವಗುಣ ಸಂಪನ್ನನೀತನು |
ಸತ್ಯ ಧರ್ಮದ ನಿಯಮ ಪಾಲಕ |
ಸತಿ ಮನೋರಮೆಯನ್ನು ಪೆತ್ತಿಹ | ಪಿತನು ಇವನು ||೪೬||

ಇಂತಿರಲು ನೃಪ ವೀರಸೇನನು |
ಸಂತಸದಿ ಸಭೆಯನ್ನು ಸೇರಿರೆ |
ನಂತರದಿ ಚರನೋರ್ವ ಧಾವಿಸಿ | ನಿಂತನಾಗ ||೪೭||

**ಕಾಪಿ - ಅಷ್ಟ**
ವೀರಸೇನನೆ ಲಾಲಿಸಯ್ಯಾ | ಪೊಸತು |
ವಾರುತೆಯೊಂದಿದೆ ಕೇಳಬೇಕಯ್ಯಾ|| ಪ ||
ಧಾರಿಣೀಪತಿ ಧ್ರುವಸಂಧಿ | ಬೇಟೆ |
ಕಾರಣದಿಂದಾತ ಮರಣವ ಹೊಂದಿ ||
ಧೀರ ಸುದರ್ಶನನಿಂಗೆ | ಪಟ್ಟ |
ವೇರಲು ಪೇಳ್ದರೆಯುಂಟಾಯ್ತು ದಂಗೆ ||೪೮||

ದುಷ್ಟ ಯುಧಾಜಿತ ಬಂದ | ನೀತಿ |
ಭ್ರಷ್ಟ ಮೊಮ್ಮಗೆ ಪಟ್ಟವೀಯುವುದೆಂದ ||
ಶಿಷ್ಟೆ ಮನೋರಮೆ ತಿಳಿದು | ನನಗೆ |
ಇಷ್ಟು ಪೇಳಿದಳು ನೀ ಕರೆದು ತಾರೆಂದು ||೪೯||

**ನವರೋಜು - ಏಕ**
ಚಾರಕನೆಂದುದ ಕೇಳಿ | ದೊರೆ |
ವೀರಕ ಯೋಚನೆ ತಾಳಿ ||
ಧೀರ ಸುದರ್ಶನನೆನ್ನಯ ಮೊಮ್ಮನು |
ಸೇರುತಲವನನು ರಕ್ಷಿಪುದುಚಿತವು ||೫೦||

**ಭೈರವಿ - ಅಷ್ಟ**
ಯುದ್ಧಜಿತನ ಸಂಗಡ | ಸಂಗರಕೆಂದು |
ಸಿದ್ಧನಾದೆನು ಮುಂಗಡ ||
ಮುದ್ದು ಮೊಮ್ಮಗನನ್ನು | ಪಟ್ಟಕೇರಿಸೆ ಪ್ರಾಣ |
ಬಿದ್ದು ಪೋಗಲು ಬದ್ಧನು ||೫೧||

ವೀರಸೇನನು ಹೊರಟ | ಕೋಸಲಕಂದು |
ಭಾರಿ ಸೇನೆಯ ಸಹಿತ ||
ಘೋರ ಯುದ್ಧವ ಗೈದು | ಖಳ ಯುದ್ಧಜಿತನನ್ನು|
ಗಾರುಗೆಡಿಸುವುದಕೆ || ೫೨||

**ಭಾಮಿನಿ**
ಬಂದ ಪೂರ್ಣಿಮೆ ದಿನದಿ ಪುರಜನ |
ಸಂದಣಿಸಿರಲು ಸಚಿವ ಮುಖ್ಯರು |
ವಂದಿ ಮಾಗಧ ದಂಡನಾಯಕ ವೃಂದ ಸೇರಿರಲು ||
ಚಂದದಿಂದಲಿ ಕುಲಪುರೋಹಿತ |
ಗಂಧ ಮಿಶ್ರಿತ ಗಂಗೆಯುದಕವ |
ತಂದು ಕುವರಗೆ ಪಟ್ಟಬಂಧನ ಮಾಡಲನುವಾಗೆ ||೫೩||

**ಸೌರಾಷ್ಟ್ರ - ತ್ರಿವುಡೆ**
ಅಷ್ಟರೊಳಗಾಚೆಯಲಿ ದುರುಳ ನಿ |
ಕೃಷ್ಟ ಬುದ್ಧಿಯ ಯುದ್ಧಜಿತನತಿ |
ದುಷ್ಟನಾಗಿಹ ಶತ್ರುಜಿತನೊಡೆ | ಸ್ಪಷ್ಟನಾದ ||೫೪||

ಏನು ನಡೆದಿಹುದಿಲ್ಲಿ ಪಟ್ಟದ |
ಸ್ಥಾನವೆಂದಿಗು ಶತ್ರುಜಿತನದು |
ನಾನು ಬಿಡೆನು ಸುದರ್ಶನನಿಗಾ | ಸ್ಥಾನಮಾನ ||೫೫||

ಸತ್ತುಪೋಗುವ ಮುಂಚೆ ರಾಯನು |
ಪತ್ನಿ ಲೀಲಾವತಿಗೆ ವಚನವ |
ನಿತ್ತು ಪೇಳ್ದನು ಪಟ್ಟವದು ಕಿರಿ | ಶತ್ರುಜಿತಗೆ ||೫೬||

ಶತ್ರುಜಿತ ತಾನೆಂದ ಪ್ರೀತಿಯ |
ಪುತ್ರನಾಗಿಹೆನೆನ್ನ ತಂದೆಗೆ |
ಛತ್ರಪತಿ ತಾನಲ್ಲದಿದ್ದರೆ | ಮತ್ತೆ ಯಾರು ||೫೭||

**ಕೇದಾರಗೌಳ - ಝಂಪೆ**
ಕುಲಪುರೋಹಿತನೆಂದನು | ಪಟ್ಟಕ್ಕೆ |
ಸಲುವವನು ಹಿರಿಯ ಸುತನು |
ಕುಲಧರ್ಮ ರವಿವಂಶಕೆ | ನೀವಿದಕೆ |
ಕಲಹಗೈಯುವಿರೇತಕೆ ||೫೮ ||

**ಮಾರವಿ - ಏಕ**
ಇತ್ತ ಕಳಿಂಗದ ವೀರಕ ಕೋಪದೊ |
ಛತ್ರಿದ ಕತ್ರಿಯನು ||
ನೆತ್ತರ ಹರಿಸುವೆನೆನ್ನುತ ದುರುಳರ |
ಹತ್ತಿರ ಧಾವಿಸಿದ || ೫೯||

**ಭೈರವಿ - ಅಷ್ಟ**
ಆ ಕಳಿಂಗದ ದೊರೆಯೋ | ನನ್ನಯ ಶೌರ್ಯ |
ಏಕರಿಯದೆ ಪೋದೆಯೋ ||
ಸಾಕು ಸುಮ್ಮನೆ ಪೋಗು | ಸುತೆಗೆ ಬುದ್ಧಿಯ ಪೇಳು |
ಸಾಕಿರುವವನಲ್ಲವೆ ||೬೦||

**ಪಂಚಾಗತಿ - ಮಟ್ಟೆ**
ಯುದ್ಧಜಿತನೆ ಎನ್ನ ಕೂಡೆ | ಯುದ್ಧ ಮಾಡಲು ||
ಸಿದ್ಧನಾಗು ನಾನು ನಿನ್ನ | ಬದ್ಧ ವೈರಿಯು ||
ಮುದ್ದು ಬಾಲ ಶತ್ರುಜಿತಗೆ | ಬುದ್ಧಿ ಪೇಳೆಲೊ ||
ಕ್ಷುದ್ರ ಮನಸ ತೊರೆದು ಬೇಗ | ಶುದ್ಧನಾಗೆಲೊ ||೬೧||

ವೀರಸೇನ ಧುರ ನಿಸ್ಸೀಮ | ಬಾರೊ ಸಮರಕೆ ||
ಘೋರ ಮೃತ್ಯು ರೂಪ ಧರಿಸಿ | ಸಾರಿ ಬಂದಿಹೆ ||
ಕ್ರೂರ ಯುದ್ಧಜಿತನ ಸಮರ | ಭಾರಿ ಗಹನವು ||
ಸಾರಿ ಪೇಳ್ವೆನಯ್ಯ ನಿನಗೆ | ತೋರು ಸಂಯಮ || ೬೨||

**ಶಂಕರಾಭರಣ - ಮಟ್ಟೆ**
ವೀರಸೇನ ಕೇಳುತಾಗ | ಭಾರಿ ಗರ್ವ ತಾಳಿ ಬೇಗ |
ಭೂರಿ ಶರದ ಮಳೆಯ ಕರೆದ | ಶೂರನಂತೆನೆ ||೬೩||

ದುರುಳ ಯುದ್ಧಜಿತನು ಬೇಗ | ಸರಳ ಬರವ ಕಾಣುತಾಗ |
ಕೆರಳಿ ನಿಂತು ನೂರು ಶರವ | ಮರಳಿ ಬಿಸುಟನು ||೬೪||

ಈ ಪರಿಯಲಿ ದೊರೆಗಳತಿ | ಕೋಪದಿಂದ ಯುದ್ಧ ಗೈಯೆ |
ಭೂಪ ವೀರಸೇನನಿಗೆ ಪ್ರ | ತಾಪವಿಳಿಯಿತು||೬೫||

ಯುದ್ಧ ರಂಗದಿಂದ ಹೊರಗೆ | ಎದ್ದು ಹೋಗಲಾರೆ ದೇಹ |
ಬಿದ್ದು ಪೋಗುವುದಕೆ ತಾನು | ಸಿದ್ಧವೆನ್ನುತ ||೬೬||

ಧುರವ ಗೈಯುತಿರಲು ಮತ್ತೆ | ಭರಿತ ವೇಗದಿಂದ ಬಂದ |
ಸರಳು ವೀರಸೇನನನ್ನು | ತರಿದು ಕೆಡಹಿತು ||೬೭||

**ಭಾಮಿನಿ**
ವೀರಸೇನನು ಮಡಿಯೆ ಪರಿಜನ |
ಭಾರಿ ಬೆದರುತಲೋಡಿ ಹೋದರು |
ಕ್ರೂರನಿವನೀ ರಾಜಕುವರನ ಕೊಲುವನೆನ್ನುತಲೀ ||
ಸೇರಿ ಯೋಚಿಸಿ ಮಂತ್ರಿ ಮುಖ್ಯರು |
ಜಾರಿಸಿದರು ಸುದರ್ಶನನ ಖಳ |
ಭೂರಿ ಹರುಷದಿಯಟ್ಟಹಾಸವ ಬೀರಿ ಮೈಮರೆದಾ ||೬೮||

**ಕೇದಾರಗೌಳ - ಝಂಪೆ**
ಅಹಹ ನೋಡಿದೆಯಪೌತ್ರ | ನನ್ನದಿದು |
ಕುಹಕದಾ ಮಂತ್ರ ತಂತ್ರ ||
ಸಹವಾಸ ಬೇಡವೆಂದು | ಓಡಿಹರು |
ಸಹಿಸದೀ ಕ್ರೌರ್ಯಕಿಂದು ||೯||

ಸಹಜಾತ ಕಾಣನೀಗ | ಕೊಲ್ಲಿಸುವೆ |
ಸಹಿಸೆ ನಾನವನ ಬೇಗ ||
ಮಹಿಯ ಸಿಂಗರಿಸು ನೀನು | ಎನ್ನುತ್ತ |
ಗಹಗಹಿಸಿ ಶತ್ರುಜಿತನು || ೭೦||

ಎಂದೆನುತ ಖಳರಿಬ್ಬರು | ಹರುಷದೊಳ |
ಗಂದು ಕೇಕೆಯ ಗೈದರು ||
ಮುಂದೇನು ಗತಿಯೆನ್ನುತ | ಮಗನೊಡನೆ |
ಬಂದಳು ಮನೋರಮೆಯು ತಾ ||೭೧||

**ಸೌರಾಷ್ಟ್ರ - ತ್ರಿವುಡೆ**
ಅಷ್ಟರೊಳಗಾರಣ್ಯ ಮಧ್ಯದಿ |
ದುಷ್ಟ ಕಳ್ಳರು ದಾಳಿಯಿಟ್ಟರು |
ಕಷ್ಟ ಬಂತೈ ಸತ್ಯ ಧರ್ಮದ | ನಿಷ್ಟರಿಂಗೆ ||೭೨||

**ಮಾರವಿ - ಏಕ**
ಎಲ್ಲಿಗೆ ಪೋಪಿರಿ ನಿಲ್ಲಿರಿ ನಿಮ್ಮದು |
ಸಲ್ಲದ ನಡೆಯೀಗ ||
ಮೆಲ್ಲಗೆ ಹೊನ್ನಿನ ಚೀಲವನಿತ್ತರೆ |
ಚೆಲ್ಲದು ರಕುತ ಜಲ ||೭೩||

ರತುನವನಿತ್ತರೆ ರಕುತವ ಹೀರುವ |
ಖತಿಯಿಹ ಖಳರಲ್ಲ ||
ಚತುರತನದಿ ನೀವ್ ರನ್ನವನಿತ್ತರೆ |
ಜತನದಿ ಪೋಗುವಿರಿ ||೭೪||

**ಕೇದಾರಗೌಳ - ಅಷ್ಟ**
ಕಾಡಬೇಡಿರಿ ನೀವು ಕಾಡಿನೊಳಗೆಯೆಂದು |
ಬೇಡುತಲಿರುವೆವಯ್ಯ ||
ಕಾಡುಪಾಲಾಗಿದೆ ನಮ್ಮಯ ಬದುಕೆಂದು |
ಕಾಡರೋದನಗೈದಳು ||೭೫||

**ಭೈರವಿ - ಝಂಪೆ**
ಎಷ್ಟು ಪೇಳಿದರೇನು | ದುಷ್ಟರಾಗಿಹ ಖಳರು |
ಭ್ರಷ್ಟತನದಿಂದವರ | ಇಷ್ಟಸಿರಿ ಸೆಳೆಯೆ ||೭೬||

ವರ ಮನೋರಮೆ ತನ್ನ | ಸಿರಿಭಾಗ್ಯ ಪೋಗಲ್ಕೆ |
ಮರುಗಿದಳು ಸುತನನ್ನು | ಕರೆದು ತಾನಾಗ ||೭೭||

**ಸಾಂಗತ್ಯ - ರೂಪಕ**

ಏತಕೀ ಪರಿಯೊಳು ವಿಧಿಯಿಂದೆಮ್ಮನು |
ಘಾತಿಸುತಿದೆಯಯ್ಯೋ ಮಗನೆ ||
ನಾಥನಿಲ್ಲದ ಮೇಲಿನ್ಯಾತಕಿಹುದು ಬಾಳು |
ಸೋತು ಹೋಗಿರುವೆನೈ ಶಿವನೆ ||೭೮||

ಸುತ ಸುದರ್ಶನ ಕೇಳು ಹತಭಾಗ್ಯನೈ ನೀನು |
ಪತಿಯಿಲ್ಲದೀ ಪಾಪಿ ನಾನು ||
ಪಿತನನು ಕೊಂದಿರ್ಪ ದುರುಳರೆಮ್ಮಯ ಮೇಲೆ |
ಖತಿಯ ತಾಳದೆ ಬಿಡುವರೇನು ||೭೯||

**ಕೇದಾರಗೌಳ - ಅಷ್ಟ**

ಅಮ್ಮ ಚಿಂತಿಸಬೇಡ ಸುಮ್ಮನೆ ದುಃಖಿಸಿ |
ನೆಮ್ಮದಿ ಕಳಕೊಳ್ಳುವೆ||
ಬೊಮ್ಮನು ಬರೆದಿರ್ಪ ಬರಹಕೆ ಸುಳ್ಳಿಲ್ಲ |
ಸಮ್ಮತಿಸಲುಬೇಕಿದೆ ||೮೦||

ಅರಿಗಳ ಕೊರಳನು ತರಿವುದು ಸರಿಯಲ್ಲ |
ಗುರಿಯಿರುವುದು ಬೇರೊಂದು ||
ಅರಸುತ ಗುರುಗಳ ಚರಣಕೆರಗುತ ನಾ |
ನರಿಯುವೆ ಪರಮಾರ್ಥ ||೮೧||

ಇಂತೆಂದು ತಾಯಿಯ ಸಂತೈಸಿ ನೃಪಸುತ |
ಚಿಂತೆ ನಿವಾರಿಸಿದ ||
ಕಂತು ಜನಕನನ್ನು ಮನದೊಳು ನೆನೆಸುತ |
ಸಂತಸದಲಿ ನಡೆದ ||೮೨||

**ಭಾಮಿನಿ**

ಮುಂಬರುತಲಿರೆ ದೂರದೊಳಗಾ |
ಜಂಬು ಚೂತ ಕದಂಬ ಮರಗಳು |
ತುಂಬಿ ಮೆರೆಯುವ ಶಾಂತದುಪವನವೊಂದು ಕಾಣುತಿರೆ ||
ಅಂಬು ಹರಿವ ನಿನಾದದೊಂದಿಗೆ |
ತಂಬೆಲರ ಹಿತ ಸ್ಪರ್ಶ ಮತ್ತಾ |
ಕಂಬು ಕಂಠದ ಪ್ರಣವ ಮಂತ್ರದ ಘೋಷ ಕೇಳುತಲಿ ||೮೩||

**ಸೌರಾಷ್ಟ್ರ - ತ್ರಿವುಡೆ**

ಬಂದರಾ ಭರದ್ವಾಜರಾಶ್ರಮ |
ಕಂದು ಪಡೆಯಲು ಮುನಿಯೊಳಾಶ್ರಯ |
ವಂದಿಸುತ ಮುನಿ ಪಾದಗಕೆರಗುತ | ಲೆಂದರಿಂತು ||೮೪||

**ಕಾಂಬೋಧಿ - ಅಷ್ಟ**

ಪರಮ ಪಾವನ ಮುನಿವರರೆ | ನಾ |
ವರಸಿ ಬಂದೆವು ನಿಮ್ಮ ಚಹರೆ ||
ಚರಣಕೊಂದಿಪೆನೀಗ ಶಸ್ತ್ರ ಶಾಸ್ತ್ರಗಳನ್ನು |
ಅರಿವ ಮಾರ್ಗವ ತೋರುತೆನ್ನನು |
ಹರಸಿ ನೀವ್ ಪರಿಣತನ ಮಾಳ್ಪುದು ||೮೫||

**ಕೇದಾರಗೌಳ - ಅಷ್ಟ**
ಯಾರಯ್ಯ ಯಾರು ನೀ  ಪಿತನಾರು ಪೆಸರೇನು  |
ಊರಾವುದೆಂದು ಪೇಳು ||
ಮೂರು ಲೋಕದಿ ನಿನ್ನ ಶಸ್ತ್ರ ಶಾಸ್ತ್ರಗಳಲ್ಲಿ |
ವೀರನ ಮಾಡುವೆನು ||೮೬||

ಪಿತ ಧ್ರುವಸಂಧಿಯು ಮಾತೆ ಮನೋರಮೆ  |
ಸುತ ಸುದರ್ಶನನೆ ನಾನು ||
ಹತನಾಗೆ ತಂದೆಯು ತಾಯೊಡಗೂಡುತ  |
ಗತಿಶೂನ್ಯನಾಗಿ ಬಂದೆ ||೮೭||

**ನವರೋಜು - ಏಕ**
ಮೆಚ್ಚಿದೆನೈ ಸುಕುಮಾರ  | ನಾ |
ಹಚ್ಚುವೆ ಜ್ಞಾನದ ಸೊಡರ ||
ಎಚ್ಚರದಿಂದಲಿ ನಿಚ್ಚವು ನೀನ್  ಕಲಿ  |
ಸಚ್ಚರಿತನೆ ಜಗಕಚ್ಚರಿಯಾಗುವೆ ||೮೮||

**ಸೌರಾಷ್ಟ್ರ - ತ್ರಿವುಡೆ**
ಇಂದಿನಾ ದಿನದಿಂದ ನಿಮ್ಮಯ |
ಕಂದನೀತನು ಎಂದು ಯೋಚಿಸಿ  |
ಮುಂದಣದ ದಾರಿಯನು ತೋರ್ವುದು  | ತಂದೆಯಾಗಿ ||೮೯||

ಎಂದಳೀತೆರ ವರ ಮನೋರಮೆ  |
ವಂದಿಸುತ ಭರದ್ವಾಜ ಮುನಿಗಳ  |
ದ್ವಂದ್ವ ಪಾದಕೆ ಸುತನ ಕೆಡೆದಳು  | ಚಂದದಿಂದ ||೯೦||

**ಕಾಂಬೋಧಿ - ಝಂಪೆ**
ಈ ರೀತಿಯೊಳು ಕುವರ ಮುನಿಪನಾಶ್ರಯದೊಳಗೆ  |
ಸೇರಿ ದಿನ ಕಳೆಯುತ್ತಲಿರ್ದ ||
ಚಾರು ಗುರು  ಸೇವೆಯೊಳು ವಿದ್ಯೆಯೆಲ್ಲವ ಕಲಿತು  |
ವೀರನಾದನು ಸುದರ್ಶನನು ||೯೧||

**ಭಾಮಿನಿ**
ಉರುಳಿ ಹೋದವು ಹಲವು ದಿನಗಳು  |
ತರಳ ನೃಪಸುತ ಶಸ್ತ್ರ ಶಾಸ್ತ್ರವ  |
ಪರಮ ಗುರುವಿನ ದಯದಿ ತಿಳಿಯುತ ಪ್ರೌಢನಾಗಿರಲು ||
ವರ ಮನೋರಮೆ ಸುತನ ಸುಳಿವನು  |
ಚರರು ಪೇಳ್ದರು ಯುದ್ಧಜಿತನಿಗೆ  |
ದುರುಳ ಹರುಷದಿ ಶತ್ರುಜಿತನನು ಕರೆದು ಪೇಳಿದನು ||೯೨||

**ಕಾಂಬೋಧಿ - ಝಂಪೆ**
ಶತ್ರುಜಿತ ಕೇಳಿದೆಯ ಭರದ್ವಾಜರಾಶ್ರಮದಿ  |
ಶತ್ರುವಾಶ್ರಯ ಪಡೆದ ಮಾತ ||
ಕತ್ತು ಕತ್ತರಿಸಲ್ಕೆ ಕತ್ತಿ ಪಿಡಿದಾಶ್ರಮಕೆ  |
ಮುತ್ತೋಣ ನಾವ್ ಸೇನೆ ಸಹಿತ ||೯೩||

ಎಂದು ಯೋಚಿಸಿ ಖಳರು ಬಂದರಾಶ್ರಮಕಂದು |
ನಿಂದಿರದೆಯೊಳಪೊಕ್ಕು ನಡೆಯೆ ||
ಅಂದು ಮುನಿಪನು ಘನದ ಮೌನವ್ರತ ಧರಿಸಿರಲು |
ವಂದಿಸದೆ ಮೌನಿಯನು ಜರೆಯೆ ||೯೪||

**ಭೈರವಿ - ಏಕ**
ವ್ರತಕತಿ ಭಂಗವ ತಂದ | ದುರ್ |
ಮತಿಗಳ ನೋಡುತಲೆಂದ ||
ಅತಿ ದುರುಳರು ನೀವಹುದು | ಇತಿ |
ಮಿತಿಯೊಳಗಿರೆ ಸೊಗಸಹುದು ||೯೫||

ಎಲವೋ ಬಡಕಲು ಮುನಿಯೆ | ನಾ |
ನುಳುಹೆನು ನಿನ್ನನು ಮುನಿಯೆ ||
ತಲೆತಪ್ಪಿಸಿದಹಿತರನು | ನೀ |
ಸಲಹಿದಿಯಲ್ಲವೆಯೇನು ||೯೬||

ದುರುಳರ ಯೋಚನೆ ತಿಳಿದು | ಮುನಿ |
ಕೆರಳುತ ಸೃಜಿಸಿದ ಮುನಿದು ||
ಧುರ ವಿಕ್ರಮಿ ಭಟರುಗಳು | ಸಾ |
ವಿರ ಸಂಖ್ಯೆಯೊಳೆಸೆದಿರಲು || ೯೭||

ಧುರ ವಿಕ್ರಮಿ ಯೋಧರನು | ಕಂ |
ಡುರುತರ ಭಯ ಕ್ಷೋಭೆಯನು ||
ದುರುಳರು ಹೊಂದುತಲಾಗ | ನಿಜ |
ಪುರಕೋಡಿದರತಿ ಬೇಗ || ೯೮||

**ಕಂದ**
ಈ ಪರಿ ಮುನಿ ಭರದ್ವಾಜಂ |
ಶಾಪವನೀಯದೆ ದುರುಳರನೋಡಿಸುತಂದುಂ ||
ಭೂಪಾಲ ಸುತನ ಪೊರೆದಂ |
ಶ್ರೀಪತಿ ದಯದಿಂ ಸುದರ್ಶನನತಿ ಸುಕ್ಷೇಮಂ ||೯೯||

**ಸೌರಾಷ್ಟ್ರ - ತ್ರಿವುಡೆ**
ಕಾಶಿ ದೇಶದ ರಾಜವರ್ಧನ |
ಭೂಷಣದಿ ವಿಷ್ಟರವನೇರುತ |
ತೋಷದೊಳು ಸಭೆ ಸೇರಿ ಮಾಡಿದ | ಭಾಷಣವನು ||೧೦೦||

ಕ್ಷಾಮ ಡಾಮರವಿಲ್ಲ ರಾಜ್ಯದಿ |
ಕ್ಷೇಮದಿಂದಿಹರೆಲ್ಲ ಸುಜನರು |
ಕಾಮರಿಪು ವರ ವಿಶ್ವನಾಥನ | ಪ್ರೇಮದಿಂದ ||೧೦೧||

ಮಡದಿ ಮಾನಿನಿಯನ್ನು ಸೇರುತ |
ಪಡೆದೆ ಶಶಿಕಲೆಯೆಂಬ ಸುತೆಯನು |
ಕೊಡುವೆ ರಾಜ್ಯವ ಮಗಳ ವರಿಸುವ | ಹುಡುಗನಿಂಗೆ ||೧೦೨||

ಅರಸನೀ ಪರಿಯಿಂದ ನುಡಿಯುತ |
ಕರೆಸಿದನು ಕೆಲಬಲಕೆ ಮಂತ್ರಿಯ |
ಕರಣವೊಂದಿಹುದಯ್ಯಯೆನ್ನುತ | ಲೊರೆದನಿಂತು ||೧೦೩||

**ಕಾಂಬೋಧಿ - ಅಷ್ಟ**
ಮಂತ್ರೀಶ ಕೇಳಯ್ಯ ಸೊಲ್ಲ | ಮಮ |
ಚಿಂತೆಯ ತೊಲಗಿಸು ಮೆಲ್ಲ ||
ಬಂತು ವಸಂತವು ಜಾತೆ ಶಶಿಕಲೆಗೆ |
ಕಂತು ರೂಪನಿಗಿಂತ ಚೆಲುವನ |
ನೆಂತು ಹುಡುಕುತ ಲಗ್ನ ಗೈವೆನು ||೧೦೪||

**ಸಾರಂಗ - ಅಷ್ಟ**
ಅರಸಲು ಬೇಕವನ | ಶಚಿದೇವಿಗೆ |
ಸುರಪಾಲನಂಥವನ ||
ಅರಸುಕುಮಾರರು | ನೆರೆದಿರ್ಪ ಸಭೆಯಲ್ಲಿ |
ತರುಣಿಯ ವರಿಸುವ | ಪರಿಣಯ ವಿರಚಿಸು ||೧೦೫||

**ಸುರುಟಿ - ಏಕ**
ಬಲು ಮೆಚ್ಚಿದೆ ನಿನಗೆ | ನಿನ್ನಯ |
ಸಲಹೆ ಸಲುಗೆಗಳಿಗೆ ||
ಸಲಹಿದ ತರಳೆಗೆ | ಸಲಿಸುವೆ ವರನನು |
ಬಲಿಯುವೆ ಪರಿಣಯ | ಕಳೆಗಟ್ಟುವ ತೆರ || ೧೦೬||

ಸುತೆ ಶಶಿಕಲೆ ತಾನು | ಹುಡುಕಲಿ |
ಅತಿ ಸುಂದರನನ್ನು ||
ಅತುಳ ಪರಾಕ್ರಮ | ದತಿ ಗುಣ ಶೋಭಿತ |
ಮತಿಯುತನನು ನೃಪ | ಸುತರೊಳು ವರಿಸಲಿ ||೧೦೭||

ಎಂದೀ ಪರಿಯೊಳಗೆ | ರಾಯನು |
ಸಂದೇಶಿಸಿ ಚರಗೆ ||
ಬಂದಿಹ ಚರನಿಗೆ ಚಂದದಿ ಪರಿಣಯ |
ದಂದವ ನುಡಿದಾ | ನಂದವ ಹೊಂದುತ || ೧೦೮||

ಪರಿಪರಿ ದೇಶಗಳ | ತಿರುಗುತ |
ದೊರೆಸುತರನ್ನೆಲ್ಲ ||
ಪರಿಣಯಕೆನ್ನುತ | ಕರೆತರು ಬೇಗನೆ |
ಅರಸುಕುಮಾರಿಯು | ವರಿಸಲಿ ವರನನು || ೧೦೯||

ಚರನತಿ ಸಂತವಿಸಿ | ಪೇಳಿದ |
ದೊರೆ ಪಾದಕೆ ನಮಿಸಿ ||
ಪೊರಡುವೆ ನೀಗಲೆ | ಪರಿಪರಿ ದೇಶಕೆ |
ಅರುಹುತ ವಿಷಯವ | ಅರಸುವೆ ವರನನು ||೧೧೦||

**ಭಾಮಿನಿ**
ತರುಣಿ ಶಶಿಕಲೆಗಿಂತು ರಾಯನು |
ಪರಿಣಯವ ನಿಶ್ಚೈಸಿ ಚಾರರ |
ತೆರಳಿಸಿದನಾವಂತಿ ವಂಗ ಕಳಿಂಗ ಪುರಗಳಿಗೆ ||
ಹರುಷದಲಿ ನೃಪ ತನ್ನ ಪುರವನು |
ಮೆರುಗುಗೊಳಿಸಲು ಪೇಳೆ ಕಾಶೀ |
ಪುರದ ಸೊಬಗಿಮ್ಮಡಿಯ ಪಡೆಯಿತು ಹರನ ಕೃಪೆಯಿಂದ ||೧೧೧||

**ಸೌರಾಷ್ಟ್ರ - ತ್ರಿವುಡೆ**
ದಿನಮಣಿಯ ಪ್ರಭೆಯನ್ನು ಹೋಲುವ |
ಕನಕವರ್ಮನು ವಂಗ ದೇಶದೊ |
ಳನುದಿನವು ವಿಷ್ಕರದಿ ಮೆರೆವನು | ದಿನಪನಂತೆ ||೧೧೨||

ಒಂದು ದಿನ ನೃಪ ಕನಕವರ್ಮನು |
ಚಂದದಿಂದಲಿ ಸಭೆಯ ಸೇರಿರೆ |
ಬಂದು ಕಾಶಿಯ ಚಾರ ನುಡಿದಾ | ನಂದದಿಂದ ||೧೧೩||

**ಸಾರಂಗ - ಅಷ್ಟ**
ಅರಸನಾನರುಹುವೆನು | ಕಾಶೀಶನು |
ಕರೆಯನ್ನು ಕಳಿಸಿಹನು ||
ಪರಿಣಯ ಶಶಿಕಲೆ | ಗಿರಲಾಕೆ ಸಭೆಯಲ್ಲಿ |
ದೊರೆಸುತನೋರ್ವಂಗೆ | ವರಮಾಲೆಯಿಡುವಳು ||೧೧೪||

**ಸುರುಟಿ - ಏಕ**
ಬಲು ಸಂತಸವೆನಗೆ | ದೊರೆಸುತೆ |
ಯಳು ದೊರಕುವ ಬಗೆಗೆ ||
ಚೆಲುವೆ ಶಶಿಕಲೆಯ | ಗೆಲಬೇಕಾದರೆ |
ಸುಲಭದಿ ಕಾಶಿಗೆ | ತಲುಪುವೆ ಶೀಘ್ರದಿ ||೧೧೫||

ಎಂದತಿ ಸಂಭ್ರಮಿಸಿ | ರಾಯನು |
ಬಂದ ಚರನ ಕಳಿಸಿ ||
ಸುಂದರಿ ಶಶಿಕಲೆ | ಯಂದವ ನೆನೆಯುತ |
ಚಂದದಿ ಪೊರಟಾ | ನಂದದಿ ಕಾಶಿಗೆ ||೧೧೬||

**ಭೈರವಿ - ಝಂಪೆ**
ಇಂತಿರಲು ಜಗದೇವ | ಕುಂತಳದ ನಗರದೊಳು |
ಸಂತುಲಿತದಾಡಳಿತ | ಯಂತ್ರ ನಡೆಸುತಲಿ || ೧೧೭||

ಮಂತ್ರಿ ಜನ ಮುಖ್ಯರೊಳು | ಚಿಂತಿಸುತಲಾಸನದಿ |
ಕುಂತಿರಲು ಚರಬಂದ | ಸಂತಸದೊಳಾಗ ||೧೧೮||

ಬಂದ ಚಾರಕನೊಡನೆ | ಯಂದು ದೊರೆ ಜಗದೇವ |
ತಂದಿರುವ ಸುವಿಚಾರ | ದಂದ ಪೇಳೆಂದ ||೧೧೯||

**ಮುಖಾರಿ - ಏಕ**
ಕಾಶೀಶ ಕಳುಹಿ ಬಂದೆನಯ್ಯಾ | ವರನನ್ನು ಹುಡುಕಿ |
ದೇಶ ಸಂಚಾರ ಗೈದೆನಯ್ಯಾ ||
ಆಶೆಯ ಕುವರಿಗೆ ಪರಿಣಯ ಮಾಳ್ಪನು |
ತೋಷದಿ ಬರುವುದು ವರ ನೀವೆನುತಲಿ ||೧೨೦||

**ಮಾರವಿ - ಏಕ**
ಚಾರಕ ಪೇಳಿದ ನುಡಿಯನು ಕೇಳುತ |
ವೀರನು ಸಂಭ್ರಮಿಸೀ ||
ಧಾರಿಣಿಯೊಳು ನನಗಿಂತಲು ಚೆಲುವರು |
ಭಾರಿಯಿರುವರೇನು ||೧೨೧||

ಪರಿಣಯ ಮಂಟಪದೊಳಗಿರೆ ನನ್ನನು |
ವರಿಪಳು ಶಶಿಕಲೆಯು ||
ದೊರೆಸುತರೆಲ್ಲರು ಧುರಕೆನ್ನುತ ಬರೆ |
ಹೊರಗಿರಿಸುವೆಯವರ ||೧೨೨||

ಎನ್ನುತಲಾ ಜಗದೇವನು ಕಾಶಿಗೆ |
ಮುನ್ನಡೆದನು ಭರದಿ ||
ಚೆನ್ನೆ ಶಶಿಕಲೆಯ ಹೊಂದುವೆನೆನ್ನುತ |
ತನ್ನೊಳು ತಾನ್ ಬಗೆದ ||೧೨೩||

**ಯಮುನಾ ಕಲ್ಯಾಣಿ - ತ್ರಿವುಡೆ**
ಧುರ ಧುರಂಧರನೆಂಬ ಖ್ಯಾತಿಯ |
ವರ ಧನಂಜಯನೆಂಬನು ||
ಧರಣಿಯೊಳು ಸೌರಾಷ್ಟ್ರ ಪುರವನು |
ಹರುಷದೊಳು ತಾನ್ ಪೊರೆವನು ||೧೨೪||

ನೃಪ ಧನಂಜಯನೊಂದು ದಿನ ತಾ |
ನಪರಿಮಿತ ಜನ ಮಧ್ಯದಿ ||
ನಿಪುಣ ಸಚಿವರ ವೃಂದದೊಳಗತಿ |
ವಿಪುಲ ಸೊಬಗಿನೊಳೆಸೆದನು ||೧೨೫||

**ಕಂದ**
ಅಂದಾ ನೃಪತಿ ಧನಂಜಯ |
ನಂದದ ಸೊಬಗಿನ ಮಹಾಸಭೆಗೆ ಚರನೋರ್ವಂ ||
ಬಂದಂ ಕಾಶೀಶನ ಸುತೆ |
ಸುಂದರಿ ಶಶಿಕಲೆಯ ಲಗ್ನ ವಿಷಯವ ಪೇಳ್ದಂ ||೧೨೬||

**ಬೇಗಡೆ - ಏಕ**
ಅಹಹ ಸಂತಸ ವಾರ್ತೆ ಕೇಳಿದೆನು | ಕಾಶೀಶ ಕುವರಿಯ |
ಬಹು ವಿಶೇಷದ ಲಗ್ನ ವಿಷಯವನು ||
ಬಹೆನು ಕಾಶೀ ದೇಶಕೀಗಲೆ |
ಬಹಳ ಸೊಬಗಿನ ಮದುವೆಗೆನ್ನುತ |
ಮಹಿಯ ನೃಪಸುತರನ್ನು ಸೋಲಿಸಿ |
ತಹೆನು ಶಶಿಕಲೆಯನ್ನು ವರಿಸುತ ||೧೨೭||

ಎಂದು ನೃಪತಿಯು ಮನದಿ ಯೋಚಿಸುತ | ಸಿದ್ಧತೆಯ ಮಾಡಿದ | ನಂ
ದು ಕಾಶಿಗೆ ಪೋಪೆನೆಂದೆನುತ ||
ಕುಂದ ಕುಟ್ಮಲ ರದನೆಯನು ತಾ |
ನೆಂದು ಕಾಣುವೆನೆನುತ ಯೋಚಿಸಿ |
ಚಂದದಿಂದಲಿ ಯಾನಗೈದನು |
ವೃಂದ ಸಹಿತಾನಂದದಿಂದಲಿ ||೧೨೮||

**ಮಧ್ಯಮಾವತಿ - ತ್ರಿವುಡೆ**
ಇತ್ತನೋಲಗ ಶತ್ರುಜಿತನು |
ನೃತ್ತ ಯುದ್ಧಾಭಿಜಿತನೊಳು |
ಮತ್ತೆಯಹಿತನ ನೆನೆದು ಪೇಳಿದ |
ಸತ್ತು ಪೋಗದೆಯಿರಲಾ | ಪತ್ತುಯೆಂದ ||೧೨೯||

**ಸಾಂಗತ್ಯ - ರೂಪಕ**
ಎಂದತಿ ಚಿಂತೆಯೊಳಿರಲಾಗ ಚರನೋರ್ವ |
ವಂದಿಸಿದನು ಪದತಲಕೆ ||
ಬಂದೆನು ಕಾಶಿಯ ದೇಶದಾಕಡೆಯಿಂದ |
ತಂದಿರ್ಪೆ ಶುಭ ಸಮಾಚಾರ ||೧೩೦||

ಸುಂದರಿ ಶಶಿಕಲೆ ಕಾಶೀಶ ಕುವರಿಗೆ |
ಮುಂದೆ ಸ್ವಯಂವರವಿಹುದು ||
ಬಂದಿರ್ಪ ನೃಪಸುತರಲ್ಲೋರ್ವ ವರನನು |
ಚಂದದಿ ತಾನ್ ವರಿಸುವಳು ||೧೩೧||

ಈ ಪರಿಯೊಳು ಚರ ಪರಿಣಯದಂದವ |
ಭೂಪತಿಗರುಹಿದನಾಗ ||
ಪಾಪಿ ಪಿತಾಮಹನೊಡಗೂಡಿ ಕಾಶಿಗೆ |
ಆ ಪರಾಕ್ರಮಿ ಪೊರಮಟ್ಟ ||೧೩೨||

**ಮಧುಮಾಧವಿ - ತ್ರಿವುಡೆ**
ಇಂದುಮುಖಿಯಾನಂದದಿಂದಲಿ |
ಸುಂದರಾಂಗವ ಹೊಂದಿ ಬಂದಳು |
ಮಂದಸ್ಮಿತೆ ಸುಮಗಂಧಿ ಶಶಿಕಲೆ |
ಯಂದು ವೃಂದದಿ ನಿಂದಳು ||೧೩೩||

ಅಂಗಜನ ಮದದಾನೆಯಂದದ |
ಮಂಗಳಾಂಗಿ ಕುರಂಗಲೋಚನೆ |
ಭೃಂಗ ಕೋಕಿಲ ವಾಣಿ ಸಖಿಯರ |
ಸಂಗಡದೊಳಿಂತೆಂದಳು ||೧೩೪||

**ಮಧುಮಾಧವಿ - ಏಕ**
ಸಖಿಯರೆ ನನಗೊಂದು ಮನದಾಸೆ ಕೇಳಿ |
ಸುಖದೊಳಾಡುವ ನಾವು ತಣ್ಣೀರ ಕೇಳಿ ||
ಮುಖದೋರ್ವುದೀ ಪೊತ್ತು ಸರಸಿಯ ಕಡೆಗೆ |
ಪಿಕದಿಂಚರವ ಕೇಳ್ವ ವನಕೇಳಿ ಕಡೆಗೆ ||೧೩೫||

ಒಡತಿ ನೀನಾಡಿದ ನುಡಿ ಸರಿಯಿಹುದು |
ತಡಮಾಡದೆಯೆ ಬೇಗ ನಾವ್ ಪೋಗಬಹುದು ||
ಒಡಗೂಡಿ ವಿಧ ವಿಧ ಪುಷ್ಪ ಕೊಯ್ಯೋಣ |
ಮುಡಿಗೇರಿಸುತ ಬಲು ಸುಖ ಪಡೆಯೋಣ ||೧೩೬||

**ಕಂದ**
ಎಂದಾ ನೀರೆಯರತಿ ಚೆಲು |
ವಿಂದಾ ಬೇಗ ಸರಸಿಯೆಡೆ ಗಮಿಸುತಲಾಗಂ ||
ಮಿಂದು ಸುವಸ್ತ್ರವನುಡುತಾ |
ನಂದದಿ ಸುಂದರ ಸುಮಗಳನರಸುತ ಬಂದರ್ ||೧೩೭||

**ಪಂಚಾಗತಿ - ಮಟ್ಟೆ**
ನವ ವಸಂತದೊಳಗೆ ಸೃಷ್ಟಿ ಚೆಲುವ ಮಂದಿರ |
ಭುವನವಾಯ್ತು ಸ್ವರ್ಗ ಸೊಬಗ ಪಡೆದು ಸುಂದರ ||
ರವಿಯ ಕಿರಣದಿಂದ ಧರಣಿ ಬಲು ಮನೋಹರ |
ತವಕದಿಂದ ಹಾಡಿ ಕುಣಿವ ಸುಖವು ಸುಮಧುರ ||೧೩೮||

**ಕಾಂಬೋಧಿ - ಝಂಪೆ**
ಸುಮನ ಸುಂದರ ಮಾರ ಸುಮನೋರಮೆಯ ಕುವರ |
ಸುಮವನರಸುತ ಸುಳಿದು ಬಂದ ||
ಕಮನೀಯ ಲಾವಣ್ಯದಿಂದಲತಿಶೋಭಿಸುವ |
ಕಮಲವನದೆಡೆಗೈದು ನಿಂದ ||೧೩೯||

**ಕಾಪಿ - ಅಷ್ಟ**
ಅಮಮ ಏನ್ ಚೆಲುವಿನ ಚಿತ್ರ | ಇಂಥ |
ಕಮಲದ ವನಕೆನ್ನ ಸಾಲದು ನೇತ್ರ ||ಪ||
ವಿಮಲಾರವಿಂದದ ಮೊಗವ | ನಭದ |
ದ್ಯುಮಣಿಯು ನೋಡುತ ತನ್ನೊಳು ನಗುವ ||
ಭ್ರಮರವು ಸುಮದ ಮೇಲೇರಿ | ತಾನು |
ಸುಮಧುವ ಹೀರುತ ಗಗನಕೆ ಹಾರಿ ||೧೪೦||

ವಾರಿಯಮೃತ ಜಲದಂತೆ || ಮತ್ತೆ |
ತೋರಿ ರಾಜಿಪುದೀಗ ಕನ್ನಡಿಯಂತೆ ||
ಭಾರಿ ಸೌಂದರ್ಯದ ಸರಸಿ | ಇಡಿಯ |
ಧಾರಿಣಿಯೊಳಗೆಲ್ಲು ಕಾಣೆ ನಾನರಸಿ ||೧೪೧||

**ಸೌರಾಷ್ಟ್ರ - ತ್ರಿವುಡೆ**
ಮುಂಬರಿದು ಹೂವರಸಿ ನಡೆದಿರ |
ಲಂಬುರುಹದಳ ನೇತ್ರೆ ಶಶಿಕಲೆ |
ತುಂಬು ಜವ್ವನ ಕುವರನನು ಕ | ಣ್ತುಂಬಿ ನೋಡಿ ||೧೪೨||

**ನವರೋಜು - ಏಕ**
ಮನ್ಮಥನಂತಿಹನೀತಾ | ಈ |
ಹೃನ್ಮನದಿ ನೆಲೆನಿಂತಾ ||
ಚಿನ್ಮಯ ರೂಪನು | ಕಣ್ಮನ ಸೆಳೆದನು |
ಸನ್ಮತಿದೋರದೆ | ತನ್ಮಯಿಯಾಗಿಹೆ ||೧೪೩||

ಚಂದಿರಬಿಂಬಾ ವದನಾ | ಮನ |
ಮಂದಿರವೀತಗೆ ಸದನಾ ||
ಸುಂದರ ಸುಮನಸ | ರಂದವ ಪೋಲುವ |
ಚಂದದ ವರನಿವ | ಹೊಂದುವೆ ಲಗ್ನದಿ ||೧೪೪||

ಮೊದಲೊಳು ವಂದಿಪೆಯವಗೆ | ಚೆಲು |
ವದನವ ಕಾಂಬೆನು ಕೊನೆಗೆ ||
ಮದುವೆಯ ದಿನದೊಳು | ಮದುಮಗನಾಗಲು |
ಚದುರಗೆ ತಿಳಿಸುವೆ | ಹದನವನೆಲ್ಲವ || ೧೪೫||

ಎಂದಿಂತೂ ಯೋಚಿಸುತ | ಬಲು |
ಚಂದದೊಳು ನಡೆತರುತ ||
ಸಂಧಿಸುತವನಿಗೆ | ವಂದನೆಗೈದಳು | ಸುಂ
ದರಿಯಿವಳಾ | ರೆಂದನು ಮನದೊಳು ||೧೪೬||

**ಭಾಮಿನಿ**
ಚಂದ್ರಬಿಂಬಾನನೆಯ ನೋಡುತ |
ಲಂದು ನೃಪಸುತ ಧರಣಿಯೊಳಗೀ |
ಯಂದ ಪೋಲುವ ನಾರಿಯರಿರಲಸಾಧ್ಯವಹುದಲ್ಲ ||
ಸುಂದರೀಮಣಿಯೀಕೆ ಸ್ಮರಸತಿ |
ಚಂದಕಿಮ್ಮಡಿ ರಂಭೆಯಳ ತನು |
ಗಂಧ ಸೂಸುವಳೀಕೆಯನು ನುಡಿಸುವೆನು ತಾನೆಂದ ||೧೪೭||

**ಪಂಚಾಗತಿ - ಮಟ್ಟೆ**
ಅಂಗನೆಯರ ನಡುವೆಯಿರುವ ಮಂಗಳಾಂಗಿಣಿ |
ತಂಗದಿರನ ಬಿಂಬ ಪೋಲ್ವ ಸುಂದರೀ ಮಣಿ ||
ಕಂಗಳಿಂಗೆ ಮುದವನೀವ ಮಂದಗಾಮಿನಿ |
ಭೃಂಗವೇಣಿ ಪೆಸರ ಪೇಳು ಭುವನ ಮೋಹಿನಿ ||೧೪೮||

**ತುಜಾವಂತು - ಮಟ್ಟೆ**
ಕಾಶಿ ದೊರೆಯ ಕುವರಿ ಶಶಿಕಲೆ | ಸಖಿಯರೊಡನೆ |
ತೋಷದಿಂದ ವನಕೆ ಬಂದಿಹೆ || ಪ||
ಈಶನೊಲುಮೆಯಿಂದ ಪಿತ ವಿ | ಶೇಷ ಲಗ್ನವನ್ನು ಗೈವ |
ದೋಷವಿರದ ನಿನ್ನ ನೋಡಿದೆ | ವರಿಸುವಂಥ |
ಆಶೆಯೆನಗೆ ಮನದಿ ಮೂಡಿದೆ ||೧೪೯||

**ಸುರುಟಿ - ಏಕ**
ಮದುವೆಯ ಮದುಮಗಳೆ | ಹುಣ್ಣಿಮೆ |
ವಿಧುವಿನ ಮೊಗದವಳೆ ||
ಮಧುರತೆ ಮಾತಿನ | ಚದುರಳೆ ನಿನ್ನನು |
ವಧುವೆನ್ನುತ ನಾ | ಮುದದೊಳು ವರಿಸುವೆ ||೧೫೦||

ಗುರುವಿನ ಸಮ್ಮತಿಯ | ಪಡೆಯುವೆ |
ವರ ಹಿರಿಯರ ದಯೆಯ ||
ಹರುಷದಿ ತಾಯಿಯ | ಹರಕೆಯಗೊಳ್ಳುತ |
ಪರಿಣಯಕೆನ್ನುತ | ಭರದೊಳು ಬರುವೆನು ||೧೫೧||

ಪರಿಣಯ ಮಂಟಪದಿ | ಎನ್ನನು |
ವರಿಸಲು ನೀ ಮುದದಿ ||
ಅರಸುಕುಮಾರರು | ಧುರವನು ಗೈದರೆ |
ಗುರುತರ ಶೌರ್ಯದೊ | ಳರಿಗಳ ತರಿಯುವೆ ||೧೫೨||

**ಸೌರಾಷ್ಟ್ರ - ತ್ರಿವುಡೆ**

ಮಾರ ಸನ್ನಿಭ ನಿನ್ನ ರೂಪಿಗೆ |
ಮಾರು ಹೋದೆನು ನಿನ್ನನಲ್ಲದೆ |
ಯಾರ ಸೇರೆನು ನಿನ್ನ ಕೊರಳಿಗೆ | ಹಾರವೀವೆ ||೧೫೩||

**ಭಾಮಿನಿ**

ಎಂದು ಯೋಚನೆ ಗೈದು ವಧುವರ |
ರಂದು ಬೀಳ್ಕೊಂಡುರದಿ ವಿರಹವ |
ಹೊಂದಿ ಸೇರ್ದರು ತಮ್ಮ ನಗರಕೆ ಬಹಳ ತೋಷದಲಿ ||
ಬಂದ ಶ್ರಾವಣ ಪೂರ್ಣಿಮೆಯ ದಿನ |
ದಂದದೊಳು ನೃಪ ರಾಜವರ್ಧನ |
ವೃಂದದೊಳು ನೆರೆದಿರ್ಪ ಭೂಪರ ನೋಡಿ ಪೇಳಿದನು ||೧೫೪||

**ಕಾಂಬೋಧಿ - ಝಂಪೆ**

ಕೇಳಿರೈ ನೃಪ ವರರೆ ಎನ್ನಸುತೆ ಶಶಿಕಲೆಯ |
ಪಾಲಿಸಿಹೆ ಪ್ರೀತಿ ಸುಧೆ ಹರಿಸಿ ||
ಶೀಲೆ ಶಶಿಕಲೆಯೀಗ ನೃಪ ಕುವರನೋರ್ವನನು |
ಮಾಲೆ ತೊಡಿಸುತ್ತ ವರಿಸುವಳು ||೧೫೫||

ಇಷ್ಟು ಪೇಳಿದ ರಾಜನಿಷ್ಟಪುತ್ರಿಯ ಕರೆಸ |
ಲಷ್ಟ ದಳ ಕಮಲಾಕ್ಷಿ ತಾನು ||
ಸೃಷ್ಟೀಶನನು ನೆನೆಸಿ ಸ್ಪಷ್ಟ ನಿಲುವನು ತಳೆದು |
ದೃಷ್ಟಿ ನೆಟ್ಟಳು ಸಭೆಯ ಕಡೆಗೆ ||೧೫೬||

ಸುಂದರ ಸುದರ್ಶನನ ಕಂಡು ಶಶಿಕಲೆಯಾಗ |
ಚೆಂದದಿಂ ಹೂಹಾರ ಹಾಕೆ ||
ಬಂದ ನೃಪ ಸುತರೆಲ್ಲ ಶತ್ರುಜಿತನೊಡಗೂಡಿ |
ಸಂದಣಿಸಿ ಮುತ್ತಿದರು ವರನ ||೧೫೭||

**ಭೈರವಿ - ಏಕ**

ಬಡ ನೃಪ ಕುವರನೆ ಕೇಳು | ಈ |
ಬೆಡಗಿಯು ಏತಕೆ ಪೇಳು ||
ಖಡುಗವನೀಗಲೆ ಪಿಡಿದು | ತಲೆ |
ಕಡಿವೆವು ಜೀವವ ತೆಗೆದು || ೧೫೮||

ಎಲವೊ ಸುದರ್ಶನ ನೀನು | ಈ |
ಲಲನೆಯ ವರಿಸುವುದೇನು |
ಬಲಹೀನನು ನೀನಹುದು | ತವ |
ಕೊಲುವರೆ ಬಲು ಬಲವಿಹುದು ||೧೫೯||

ದೊರೆತನಯನು ನೀನಲ್ಲ | ಮಿಗೆ |
ತರುಣಿಯು ಸೇರ್ವುದಕಿಲ್ಲ ||
ಪರಿಣಯಕೊದಗಿದೆ ಬಂದು | ತವ |
ಧುರದೊಳು ಕೆಡಹುವೆ ಕೊಂದು ||೧೬೦||

**ಭೈರವಿ - ಝಂಪೆ**
ವರ ಸುದರ್ಶನನಾಗ | ಕೆರಳುತ್ತ ನುಡಿದೆಂದ |
ದೊರೆರಾಯ ಧ್ರುವಸಂಧಿ | ತರಳ ನಾನಹುದು ||೧೬೧||

ಮೇರೆ ಮೀರುತ ನೀವು | ವೀರನೆನ್ನನು ಜರೆಯೆ |
ಕೂರಸಿಯ ಪಿಡಿದು ನಾ | ಗಾರುಗೆಡಿಸುವೆನು ||೧೬೨||

**ಕಾಂಬೋಧಿ - ಝಂಪೆ**
ಅನಿತರೊಳು ಕಾಶೀಶ ವರ ಸುದರ್ಶನನನ್ನು |
ತನು ಕಾಯ್ವ ಭಟರ ನಡುವಿರಿಸೆ ||
ಮುನಿದ ಸೌರಾಷ್ಟ್ರ ಕುಂತಳ ವಂಗ ನೃಪರನ್ನು |
ತಣಿಸಿದನು ಸಾಮ ನುಡಿಗಳಲಿ ||೧೬೩||

**ಮುಖಾರಿ - ಏಕ**
ನೃಪ ಕುಲ ಮುಖ್ಯರೆಲ್ಲ ಕೇಳಿ | ಸುಕುಮಾರನಿಂಗೆ |
ಉಪಹತಿ ತರುವಿರಲ್ಲ ತಾಳಿ ||
ನೃಪಸುತನೀತಗೆ ಪರಿಣಯ ಮಾಳ್ಪೆನು |
ಕುಪಿತವ ತೋರದೆಯುಪಕರಿಸಿರಿ ನೀವ್ ||೧೬೪||

**ಸೌರಾಷ್ಟ್ರ - ತ್ರಿವುಡೆ**
ಅಷ್ಟರೊಳಗತಿ ಕ್ಷುದ್ರರಾಗಿಹ |
ದುಷ್ಟ ಯುದ್ಧಾಜಿತನು ತನ್ನಯ |
ಭ್ರಷ್ಟ ಪೌತ್ರನ ಸೇರಿ ಸಮರಕೆ | ಇಷ್ಟ ಪಟ್ಟ ||೧೬೫||

**ಶಂಕರಾಭರಣ - ಮಟ್ಟೆ**
ಯುದ್ಧ ಜಿತನು ನಾನು ನಿನ್ನ | ಬದ್ಧ ವೈರಿಯೆಂದು ತಿಳಿಯೊ |
ಯುದ್ಧ ದೊಳಗೆ ಕೊಲುವೆನೀಗ | ಸಿದ್ಧನಾಗೆಲೊ ||೧೬೬||

ಶತ್ರುಜಯನು ನಾನು ನಿನ್ನ | ಶತ್ರುವಾಗಿ ಕೊಂದ ಮೇಲೆ |
ಚಿತ್ರೆಯನ್ನು ಸೆಳೆವೆ ನಿಮಿಷ | ಮಾತ್ರದೊಳಗೆಯೆ ||೧೬೭||

**ಮಾರವಿ - ಏಕ**
ಕೇಳುತ ಕೋಪಿಸಿ ಕುವರ ಸುದರ್ಶನ |
ಸೀಳಿ ಬಿಡುವೆನೆನುತ ||
ಕಾಳಗಕನುವಾಗುತಲಾ ಖಳನನು|
ಹಾಳುಗೇಡಿಯೆಂದ ||೧೬೮||

ಸಿಕ್ಕಿದೆಯನುದಿನ ಹುಡುಕಿದ ಹುಡುಗನೆ |
ಸೊಕ್ಕನು ಮುರಿಯುವೆನು||
ಹೊಕ್ಕಿಸುವೆನು ಯಮಪುರಿಗೆನ್ನುತಲಾ |
ನಕ್ಕನು ಖಳನಾಗ ||೧೬೯||

ಇಂತೀ ಪರಿಯೊಳಗುಭಯರು ಮಾತಿನ |
ಪಂಥವ ಹೂಡುತಲಿ ||
ನಂತರದೊಳಗೆ ಸುದರ್ಶನನೆಂದನು |
ಪಿಂತಿನ ವಿಷಯವನು || ೧೭೦||

**ಭೈರವಿ - ಅಷ್ಟ**

ಹಿಂದೆ ತಾಯಿಯ ತಂದೆಯ | ಮೋಸದೊಳಂದು |
ಕೊಂದ ಪರಂಪರೆಯ ||
ಹೊಂದಿರ್ಪ ದುರುಳನೆ ಮುಂದೆ ಬಂದರೆ ನಿನ್ನ |
ಕೊಂದು ನಾ ಮುಗಿಸುವೆನು||೧೭೧||

ತರಣಿ ವಂಶದ ಕೀರ್ತಿಗೆ | ಮಸಿ ಬಳೆದಿರ್ಪ |
ಬಿರುದು ನಿನ್ನದು ಹೇಸಿಗೆ ||
ತರುಣ ನೀನಲೆದಿಹೆ | ಮರಣದ ಭಯದೊಳ |
ಗರಿತೆವು ನಾವಿದನು ||೧೭೨||

**ತುಜಾವಂತು - ಮಟ್ಟೆ**

ದುರುಳ ಯುದ್ಧಜಿತನೆ ಕೇಳೆಯ | ತರಣಿ ವಂಶ |
ದರಸುತನಕೆ ಕೇಡ ತಂದೆಯ ||
ಹಿರಿಯ ಸುತಗೆ ರಾಜ್ಯವೀವ |
ಪರಮ ನಿಯಮವನ್ನು ಮುರಿದೆ |
ತರಳರೊಡನೆ ವೈರ ಬೀಜವ | ಬಿತ್ತಿದುದಕೆ |
ಧುರದಿ ಕೊಲುವೆ ಸಾಕು ಕೈತವ ||೧೭೩||

**ಶಂಕರಾಭರಣ ಮಟ್ಟೆ**

ಮಾತನೇಕೆಯಾಡುತಿರುವೆ | ಸೋತು ಪೋಪೆಯೆಂದು ಶರವ |
ಭೀತನಾಗಲೆಂದು ಕುವರ | ಗಾತ ಹೊಡೆದನು ||೧೭೪||

ಶರವ ಮಧ್ಯೆ ಖಂಡಿಸುತ್ತ | ದೊರೆಯ ಕುವರ ನೂರು ಶರವ |
ಭರದಿ ಎಸೆದ ಖಳನ ಹಿಂದೆ | ಸರಿಸಲೋಸುಗ ||೧೭೫||

ಧುರಕೆ ನಿಂತ ಖಳನು ಸರಳು | ಬರುವುದನ್ನು ಕಾಣುತಾಗ |
ಕೆರಳಿ ಬೇಗ ತಡೆವೆನೆನುತ | ಶರವ ಪೂಡಿದ ||೧೭೬||

ತರಳನೊಡನೆ ಕಾದುತಿರಲು | ದುರುಳನಿಂಗೆ ಶಕ್ತಿಯಿಳಿದು |
ಶರದ ನೆಲೆಯನರಿಯದಂದು | ಮರುಳನಾದನು ||೧೭೭||

ಯುದ್ಧಜಿತನ ಕೂಡೆ ತರಳ | ಯುದ್ಧ ಮಾಡುತೆಂದನಾಗ |
ಕ್ಷುದ್ರ ನಿನಗೆ ಮರಣ ಬಂತು | ಸಿದ್ಧನಾಗೆಲೊ ||೧೭೮||

ಖಳನ ಬಲವು ಕುಂದುತಿರಲು | ತಿಳಿದು ಕುವರ ನಿಶಿತ ಶರವ |
ಸೆಳೆದು ಬಿಡಲು ಬಂದ ಸರಳು | ತಲೆಯನರಿಯಿತು ||೧೭೯||

**ಮಾರವಿ ಏಕ**
ಮಾತಾಮಹ ನೆಲಕೊರಗಲು ಶತ್ರುಹ |
ಖಾತಿಯ ಹೊಂದುತಲಿ ||
ಪಾತಕತನದೊಳು ಸೋದರನನು ತಾನ್ |
ಘಾತಿಪೆನೆಂದೆನುತ|| ೧೮೦||

ಭರದೊಳು ಶತ್ರುಂಜಯನೆದುರಾಗಲು |
ತರಳ ಸುದರ್ಶನನು ||
ಉರದೊಳು ಸೋದರ ಪ್ರೀತಿಯು ಹೊಮ್ಮಿರ |
ಲೊರೆದನು ನುಡಿಗಳನು ||೧೮೧||

**ಸೌರಾಷ್ಟ್ರ - ತ್ರಿವುಡೆ**
ತಮ್ಮ ಬಾರೈ ಶತ್ರುಜಿತ ನೀ |
ನೆಮ್ಮ ವಂಶದ ಕೀರ್ತಿ ವಲ್ಲರಿ |
ಸುಮ್ಮನೇತಕೆ ವೈರ ಯುದ್ಧವು | ನಮ್ಮೊಳೆಂದ ||೧೮೨||

**ಕೇದಾರಗೌಳ - ಝಂಪೆ**
ಅಹಹ ಏನ್ ಸೊಗಸು ನುಡಿಯು | ಕಪಟದೊಳು |
ಬಹಳ ನೀ ನಿಪುಣ ನರಿಯು||
ಸಹವಾಸ ಬೇಡವೆನಗೆ | ಯುದ್ಧದೊಳು |
ದಹಿಸುವೆನು ನಿನ್ನ ಹೀಗೆ ||೧೮೩||

ಬುದ್ಧಿ ಮಾತನು ಪೇಳಲು |
ಕೇಳುತಲಿ ಶುದ್ಧನಾಗುತ ಸಾಗಲು ||
ಇದ್ದುದೊಂದವಕಾಶವ | ಕೊಟ್ಟೆ ನಾ |
ಬಿದ್ದು ಪೋಗಲು ಕಾಯವ ||೧೮೪||

**ಭೈರವಿ - ಅಷ್ಟ**
ನೀತಿ ಪಾಠವ ಪೇಳ್ವೆಯ | ಈ ಕ್ಷಣ ಮುಂಚೆ |
ಮಾತಾಮಹನ ಕೊಂದೆಯ ||
ಮಾತಿನ ಪೌರುಷ | ವೇತಕೆ ನೀನೀಗ |
ಸೋತು ಪೋಗುವೆ ಯುದ್ಧದಿ ||೧೮೫||

ತಮ್ಮನೆಂದೆನುತ ನಾನು| ಸುಮ್ಮಗಿರಲು|
ಹಮ್ಮಿನಿಂದಿರುವೆ ನೀನು||
ಅಮ್ಮ ಬಂದರು ಬಿಡೆ| ಬೊಮ್ಮನೆಂದರು ನಿಲೆ|
ನಿಮ್ಮಜ್ಜನೆಡೆ ತೋರುವೆ ||೧೮೬||

**ಭೈರವಿ - ಏಕ**
ಶತ್ರುಜಿತನು ತಾನಾಗ | ಕಡು |
ಶತ್ರುವಿನಂದಿ ಬೇಗ||
ನೇತ್ರದಿ ಕಿಡಿಗಳ ಕೆದರಿ | ತಾನ್ |
ಕ್ಷತ್ರಿಯನೆನ್ನುತಲೊದರಿ ||೧೮೭||

ಎಲವೋ ಖೂಳನೆ ಕೇಳು | ತವ |
ಬಲವನು ಮುರಿಯುವೆ ತಾಳು||
ಲಲನೆಯನೀಗಲೆ ಸೆಳೆವೆ | ಈ |
ನೆಲದೊಳು ನೀನಂಡಲೆವೆ ||೧೮೮||

ನೋಡಿ ಸುದರ್ಶನ ಬಂದ | ಬಲು |
ಕೇಡಿಗನೈ ನೀನೆಂದ||
ಮೂಢನೆ ಕೊಲ್ಲುವೆನೆನುತ | ಶರ |
ಹೂಡಿದ ಸಾವಿರ ಸತತ||೧೮೯||

ಸೋದರರಿಬ್ಬರು ರಣದಿ | ಬಲು |
ಕ್ರೋಧವ ತಾಳುತ ಮುದದಿ||
ಕಾದಾಡಿದರಾಕ್ರಮದಿ | ಶರ |
ಬಾಧೆಯ ತಾಳುತ ಧುರದಿ||೧೯೦||

ವೀರ ಸುದರ್ಶನನೆಸೆದ | ಬಲು |
ಜೋರಿನ ಬಾಣವನೊಂದ||
ಭಾರೀ ಬೆಂಕಿಯನುಗುಳಿ | ತಲೆ |
ಹಾರಿತು ಮುಂಡವನಗಲಿ ||೧೯೧||

**ಕಂದ**
ಇಂತೀ ಪರಿಯೊಳು ತಮ್ಮ ನಿ |
ಗಂತ್ಯವು ತನ್ನಿಂದ ಬರಲು ಶೋಕಿಸಿಯಾಗಳ್ ||
ಕಂತು ಜನಕ ಶ್ರೀಕಾಂತನೆ |
ಸಂತತದೊಳಗೀ ಸುದರ್ಶನನ ಪೊರೆಯೆಂದಾ||೧೯೨||

**ಭಾಮಿನಿ**
ಸುಂದರದ ಪರಿಣಯದ ಮಂಟಪ |
ವಿಂದು ಕದನಕೆ ಭಾಷ್ಯ ಬರೆಯಿತು |
ಮುಂದೆಯಾದರು ಸುತೆಗೆ ಲಗ್ನವ ಮಾಳ್ಪೆನೆನ್ನುತಲಿ ||
ಚಂದದಿಂ ವರನೆಡೆಗೆ ತರಳೆಯ |
ತಂದು ವೈವಾಹವನು ವಿರಚಿಸಿ |
ಬಂದ ಪರಿಜನರಿಂಗೆ ರಾಯನು ಭೋಜನವ ನೆರಹಿ ||೧೯೩||

ವರ ಸುದರ್ಶನ ಸತಿಯ ಸಹಿತದಿ |
ಪರಮ ಗುರುವಿನ ಚರಣಕೊಂದಿಸಿ |
ಹರುಷದೊಳು ಜನನಿಯನು ಕೂಡುತ ನಡೆದ ಕೋಸಲಕೆ ||
ಪುರದ ಪರಿಜನ ವಿಬುಧ ಶ್ರೇಷ್ಠರು |
ನೆರೆದು ವಧುವರರಿಂಗೆ ತೋಷದಿ |
ಕರೆದು ಪೇಳ್ವರು ಪುರವನಾಳುತ ಪೊರೆವುದೆಂದೆನುತ ||೧೯೪||

ಈ ಪರಿಯೊಳಗೆ ವರ ಸುದರ್ಶನ |
ಶ್ರೀಪತಿಯ ದಯದಿಂದ ಕೋಸಲ |
ಭೂಪನಾಗುತ ಮೆರೆದ ಗಗನದ ಸೂರ್ಯನಂತೆ ||
ಛಾಪವಿದ್ಯಾ ನಿಪುಣ ರಾಜ್ಯವ |
ಕಾಪಿಡುವ ಜಾಣನಿವ ವಿಬುಧರ |
ಶಾಪಕೋಪಗಳಿಲ್ಲದಂತಿರೆ ರಾಜ್ಯವಾಳಿದನು ||೧೯೫||

ಕೃತಿಯ ಮುಗಿಸಿದೆನಿಂದು ನಾನು ವಿ |
ಕೃತಿಯ ಸಂವತ್ಸರದ ಕಾರ್ತಿಕ |
ಪ್ರಥಮ ದಿನ ಬಲಿ ಪಾಡ್ಯಮಿಯ ಬಲು ಪುಣ್ಯ ದಿವಸದೊಳು ||
ಚತುರನಲ್ಲವು ಕಾವ್ಯ ತತ್ವದ |
ಮತಿಯ ಬಲ್ಲಿದನಲ್ಲ ರುಕ್ಮಿಣಿ |
ಪತಿಯ ಕೃಪೆಯೊಳು ಬರೆದೆ ನಾನಿದ ಯಕ್ಷಗಾನದೊಳು ||೧೯೬||

**ಶರ ಷಟ್ಪದಿ**
ಅಂಗಜಜನಕನಿ | ಗಂಗನೆಯರಸಗೆ |
ಶೃಂಗಾರದ ವರ ರಂಗನಿಗೆ ||
ಗಂಗೆಯ ಪಿತನಿಗೆ | ತುಂಗಮಹಿಮನಿಗೆ |
ಮಂಗಳ ದೀಪವ ಬೆಳಗುವೆನು||೧೯೭||

ಅಂಬುಜನೇತ್ರನಿ | ಗಂಬುಜವದನನಿ |
ಗಂಬುಜನಾಭಗೆ ಶ್ರೀ ಹರಿಗೆ ||
ಅಂಬುಧಿಶಯನನಿ | ಗಂಬುಜೆರಮಣನಿ |
ಗಂಬುಜಪೀಠನ ಜನಕನಿಗೆ ||೧೯೮||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಅಪ್ರಕಟಿತ

**ಪ್ರಸಂಗ ಪ್ರತಿ ಆಧಾರ:** ಕವಿಯ ಮೂಲ ಬರಹ

**ಪ್ರಸಂಗ ಪ್ರತಿ ಕೊಟ್ಟವರು:** ಅಂಬರೀಷ ಭಾರದ್ವಾಜ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಅಂಬರೀಷ ಭಾರದ್ವಾಜ

**ಅಂತರಜಾಲ ಪ್ರತಿ ಬರವಣಿಗೆ:** ಅಂಬರೀಷ ಭಾರದ್ವಾಜ

**ಅಂತರಜಾಲ ಪ್ರತಿ ವಿನ್ಯಾಸ:** ರವಿ ಮಡೋಡಿ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ಶಿವಕುಮಾರ ಬಿ. ಎ. ಅಳಗೋಡು, ನಟರಾಜ ಉಪಾಧ್ಯ, ಅಶ್ವಿನಿ ಹೊದಲ